# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038

ಸಂಪುಟ:02 • ಸಂಚಿಕೆ: 50 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 17.08.2024 • ಶನಿವಾರ • ಪುಟ:04 • ಬೆಲೆ:2

Volume:02 • Issue: 50 • PRGI No:KARKAN/2023/88055 • VIJAYANAGARA • 17.08.2024 • Saturday • Page:04 • Rs:2



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ

No.1 Leading in Local News Paper

80,000

HAMPI TIMES E-PAPER READERS

94486 33038 | NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201

ಇಂದು ಶ್ರಾವಣ ಶುದ್ಧ ತ್ರಯೋದಶಿ, ಹೊಸಪೇಟೆ ಹೊರವಲಯದ ಶ್ರೀ ಶನೇಶ್ವರ ದೇವಸ್ಥಾನದಲ್ಲಿ

ಶ್ರೀ ಶನಿದೇವರ ಪ್ರತಿಷ್ಠಾಪಿಸಿದ 27ನೇ ವಾರ್ಷಿಕೋತ್ಸವ ಸಮಾರಂಭ

17 ಆಗಸ್ಟ್ 2024 ಬೆಳಿಗ್ಗೆ ಗಂಗಾಪೂಜೆ ಶನಿದೇವರಿಗೆ ತೈಲಾಭಿಷೇಕ, ಫಲ-ಪಂಚಾಮೃತ ಅಭಿಷೇಕ, ವಿಶೇಷ ಪುಷ್ಪಲಂಕಾರ

ಧರ್ಮ ಸಭೆ ಬೆಳಗ್ಗೆ 11-00 ಗಂಟೆಗೆ, ಸಾನ್ನಿಧ್ಯ ಶ್ರೀಮನ್ ಉಜ್ಜಯಿನಿ ಸದ್ಧರ್ಮ ಸಿಂಹಸನಾಧೀಶ್ವರ ಶ್ರೀಶ್ರೀಶ್ರೀ 1008 ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು

ನೇತೃತ್ವ: ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನ ಮಠದ ಶ್ರೀಮನ್.ನಿ.ಪ್ರ.ಜಗದ್ಗರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು M: 9448795049, 8762397479

ಸರ್ವರಿಗೂ ಸ್ವಾಗತ ಕೋರುವವರು: ಶ್ರೀ ಶನೇಶ್ವರ ದೇವಸ್ಥಾನ ಸಮಿತಿ (ರಿ), ಪಂಚಾಚಾರ್ಯನಗರ, ರಾಷ್ಟ್ರೀಯ ಹೆದ್ದಾರಿ 50, ಹೊಸಪೇಟೆ, ವಿಜಯನಗರ ಜಿಲ್ಲೆ



ಹಂಪಿ ಟೈಮ್ಸ್ SSLC ಮಾರ್ಗದರ್ಶಿ ಇ-ಪೇಪರ್‌ನಲ್ಲೂ ಲಭ್ಯ ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com


# ಸ್ಕೈವಾಕ್ ತೆರವು ಸ್ಟಾಪ್ ಲಾಗ್ ಅಳವಡಿಕೆ

## ಮೊದಲ ಎಲಿಮೆಂಟ್ ಅಳವಡಿಕೆ ಯಶಸ್ವಿ | ತಜ್ಞರ ತಂಡದ ಕಾರ್ಯಕ್ಕೆ ಸಚಿವ ಶ್ಲಾಘನೆ





**ಹಂಪಿ ಟೈಮ್ಸ್ ಹೊಸಪೇಟೆ**

ತುಂಗಭದ್ರಾ ಅಣೆಕಟ್ಟಿನ 19ನೇ ಗೇಟ್ ನಲ್ಲಿ ಸ್ಟಾಪ್ ಲಾಗ್ ಗೇಟ್ ಎಲಿಮೆಂಟ್ ಅಳವಡಿಕೆ ಸುಗಮಗೊಳಿಸಲು ಅಣೆಕಟ್ಟು ಮೇಲ್ಭಾಗದ ಸ್ಕೈವಾಕ್ ತೆರವುಗೊಳಿಸಿ, ಜೋಡಣೆ ಕಾರ್ಯ ಶುಕ್ರವಾರ ಭರದಿಂದ ಸಾಗಿತು. ಅಪೂರ್ಣಗೊಂಡ ಕಾರ್ಯವನ್ನು ಶುಕ್ರವಾರ ಬೆಳಗ್ಗೆ 11 ಗಂಟೆ ಸುಮಾರಿಗೆ ಕಾಮಗಾರಿ ಮತ್ತೆ ಆರಂಭಗೊಂಡಿತು. ಜಲಾಶಯದ ಸೇಫ್ಟಿ ಇಂಜಿನಿಯರ್ ಕನ್ನಯ್ಯ ನಾಯ್ಡು ಮಾರ್ಗದರ್ಶನದಲ್ಲಿ ಹತ್ತಾರು ತಂತ್ರಜ್ಞರು ಶ್ರಮಿಸುತ್ತಿದ್ದಾರೆ. ಸ್ಟಾಪ್ ಲಾಗ್ ಗೇಟ್‌ನ ಎರಡು ಎಲಿಮೆಂಟ್‌ಗಳು ಪೂರೈಕೆಯಾಗಿವೆ. ಇಲ್ಲಿನ ಸಂಕ್ಲಾಪುರದ ಎಸ್.ನಾರಾಯಣ ಮತ್ತು ಹಿಂದುಸ್ಥಾನ್ ಇಂಡಸ್ಟ್ರೀಸ್ ನಿಂದ ತಲಾವೊಂದು ಎಲಿಮೆಂಟ್ ಗಳು ಬಂದಿವೆ. ಇನ್ನೆರೆಡು ಜಿಂದಾಲ್‌ನಿಂದ ತರಲಾಗಿದೆ ಎಂದು ತಿಳಿದು ಬಂದಿದೆ. ಜಲಾಶಯ ಮೇಲ್ಭಾಗದಲ್ಲಿ ಸ್ಟಾಪ್ ಲಾಗ್ ಗೇಟ್ ಅಳವಡಿಕೆ ಕಾರ್ಯದ ಮುಂಜಾಗ್ರತಾ ಕ್ರಮವಾಗಿ ಅಣೆಕಟ್ಟು ಮೇಲ್ಭಾಗಕ್ಕೆ ಸಾರ್ವಜನಿಕರು ಸೇರಿದಂತೆ ಮಾಧ್ಯಮದವರಿಗೂ ಪ್ರವೇಶ ನಿಷೇಧಿಸಿದೆ. ಹೀಗಾಗಿ ಜಲಾಶಯದ ಕೆಳ ಭಾಗದ ಸ್ಮಾಶಾನ ಬಳಿ ನಿಂತು ಸುದ್ದಿ ಮಾಡುತ್ತಿದ್ದರು. ಮುನಿರಾಬಾದ್ ಹೆದ್ದಾರಿಯಿಂದ ಸ್ಮಶಾನಕ್ಕೆ ಸಂಪರ್ಕ ಕಲ್ಪಿಸುವ ಕಚ್ಚಾ ರಸ್ತೆಯನ್ನೂ ಎಆರ್‌ಎಸ್ ಫಾರ್ಮ್ ಸ್ಟೇ ಬಳಿ ಪೊಲೀಸ್ ಬ್ಯಾರಿಕೇಡ್ ಹಾಕಿ ರಸ್ತೆ ಬಂದ್ ಮಾಡಲಾಗಿದೆ. ಡ್ಯಾಂ ಸೇಫ್ಟಿ ಇಂಜಿನಿಯರ್ ಕನ್ನಯ್ಯ ನಾಯ್ಡು ನಿರ್ದೇಶನದಂತೆ ಯಾರಿಗೂ ಪ್ರವೇಶ ಕಲ್ಪಿಸುತ್ತಿಲ್ಲ. ಡ್ಯಾಂ ಕೆಳ ಭಾಗದ ಸ್ಮಶಾನದ ಬಳಿ ಮಾಧ್ಯಮ ಪ್ರತಿನಿಧಿಗಳೂ ನಿಲ್ಲಬಾರದು. ಪತ್ರಕರ್ತರು ಅಲ್ಲಿದ್ದರೆ ನಾನು ಕೆಲಸಮಾಡುವುದಿಲ್ಲವೆಂದು ತಾಕೀತು ಮಾಡಿದ್ದಾರೆ ಎಂದು ಹೆಸರು ಹೇಳಲಿಚ್ಛಿಸದ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

### ಗೇಟ್ ಅಳವಡಿಕೆ ಶನಿವಾರ ಪೂರ್ಣಗೊಳ್ಳಲಿದೆ: ಸಚಿವ ಜಮೀರ್

**ಹೊಸಪೇಟೆ:** ತುಂಗಭದ್ರಾ ಅಣೆಕಟ್ಟು ಗೇಟಿನ್ ಚೈನ್ ಲಿಂಕ್ ಕಟ್ ಹಿನ್ನೆಲೆಯಲ್ಲಿ ಕೈಗೊಂಡಿದ್ದ ಸ್ಟಾಪ್ ಲಾಗ್ ಅಳವಡಿಕೆ ಮೊದಲ ಹಂತದಲ್ಲಿ ಶುಕ್ರವಾರ ರಾತ್ರಿ ಯಶಸ್ವಿಯಾಗಿದೆ. ಒಟ್ಟು ಐದು ಪ್ಲೇಟ್ ಅಳವಡಿಕೆ ಯಾಗಲಿದ್ದು ಶನಿವಾರದ ವೇಳೆಗೆ ಸ್ಟಾಪ್ ಲಾಗ್ ಗೇಟ್ ಅಳವಡಿಕೆ ಕಾರ್ಯ ಪೂರ್ಣ ಗೊಳ್ಳಲಿದೆ ಎಂದು ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದ್ದಾರೆ.

ಸ್ಟಾಪ್ ಗೇಟ್ ಅಳವಡಿಕೆ ಮೊದಲ ಹಂತದ ಯಶಸ್ವಿ ಕುರಿತು ಸಚಿವ ಜಮೀರ್ ಅಹಮದ್ ಖಾನ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ದೂರವಾಣಿ ಮೂಲಕ ಮಾಹಿತಿ ನೀಡಿದರು. ಸ್ಟಾಪ್ ಗೇಟ್ ಅಳವಡಿಕೆ ಹಿನ್ನೆಲೆಯಲ್ಲಿ ಸಚಿವ ಜಮೀರ್ ಖಾನ್ ಮೂರು ದಿನಗಳಿಂದ ವೈಕುಂಠ ಅತಿಥಿ ಗೃಹದಲ್ಲೇ ವಾಸ್ತವ್ಯ ಹೂಡಿದ್ದಾರೆ. ದಿನಕ್ಕೆ ಎರಡು ಬಾರಿ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ಪ್ರಗತಿ ಪರಿಶೀಲನೆ ನಡೆಸುತ್ತಿದ್ದರು. ತಾಂತ್ರಿಕ ತಂಡದ ನಿರಂತರ ಪರಿಶ್ರಮದಿಂದ ಸ್ಟಾಪ್ ಗೇಟ್ ಅಳವಡಿಕೆ ಮೊದಲ ಹಂತದ ಯಶಸ್ಸು ಸಾಧಿಸಿದ್ದು ಇಡೀ ತಂಡಕ್ಕೆ ಸಚಿವರು ಕೃತಜ್ಞತೆ ಸಲ್ಲಿಸಿದರು. ಸಚಿವ ಶಿವರಾಜ್ ತಂಗಡಗಿ, ಕೊಪ್ಪಳ ಸಂಸದ ರಾಜಶೇಖರ್ ಹಿಟ್ನಾಳ್, ಶಾಸಕರಾದ ಎಚ್.ಆರ್. ಗವಿಯಪ್ಪ, ಕಂಪ್ಲಿ ಗಣೇಶ್ ಉಪಸ್ಥಿತರಿದ್ದರು.

**ಮೈಕ್ರೋ ನ್ಯೂಸ್**

## ಪಡಿತರ ಚೀಟಿಗಳ ಫಲಾನುಭವಿಗಳಿಗೆ ಇ-ಕೆವೈಸಿಗೆ ಅವಕಾಶ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯಲ್ಲಿ ಇ-ಕೆವೈಸಿ ಕಾರ್ಯ ಪ್ರಗತಿಯಲ್ಲಿದ್ದು, ಇನ್ನು ಬಾಕಿ ಇರುವ 47,914 ಪಡಿತರ ಚೀಟಿಗಳ ಫಲಾನುಭವಿಗಳಿಗೆ ಇ-ಕೆವೈಸಿ ಮಾಡಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ಆಗಸ್ಟ್ 31 ರೊಳಗೆ ಹತ್ತಿರದ ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿ ಇ-ಕೆವೈಸಿ ಮಾಡಿಸಲು ಕೊನೆಯ ಅವಕಾಶವನ್ನು ನೀಡಲಾಗಿದ್ದು, ಅಂತಿಮ ಅವಧಿ ಮೀರಿದ ನಂತರ ಇ-ಕೆವೈಸಿ ಬಾಕಿ ಉಳಿದ ಫಲಾನುಭವಿಗಳನ್ನು ಅನರ್ಹರೆಂದು ಪರಿಗಣಿಸಿ ಇಂತಹ ಪಡಿತರ ಚೀಟಿಗಳಲ್ಲಿನ ಸದಸ್ಯರುಗಳನ್ನು ಪಡಿತರ ಚೀಟಿಗಳಿಂದ ತೆಗೆಯಲಾಗುವುದು.

**ತಾಲೂಕುವಾರು ಇ-ಕೆವೈಸಿ ಪೂರ್ಣಗೊಳ್ಳದೇ ಇರುವ ಫಲಾನುಭವಿಗಳ ವಿವರ:**

ಹೂವಿನಹಡಗಲಿ ತಾಲ್ಲೂಕಿನಲ್ಲಿ 6299, ಹಗರಿಬೊಮ್ಮನಹಳ್ಳಿ ತಾಲ್ಲೂಕಿನಲ್ಲಿ 8029, ಹರಪನಹಳ್ಳಿ ತಾಲ್ಲೂಕಿನಲ್ಲಿ 11735, ಹೊಸಪೇಟೆ ತಾಲ್ಲೂಕಿನಲ್ಲಿ 10509, ಕೊಟ್ಟೂರು ತಾಲ್ಲೂಕಿನಲ್ಲಿ 3336, ಕೂಡ್ಲಿಗಿ ತಾಲ್ಲೂಕಿನಲ್ಲಿ 8006 ಒಟ್ಟು 47,914 ಫಲಾನುಭವಿಗಳಿರುತ್ತಾರೆ ಎಂದು ತಿಳಿಸಿದ್ದಾರೆ.

# ಡ್ಯಾಂ ಕಾರ್ಯಕ್ಕೆ ವಿಘ್ನವಾಗದಂತೆ ಗಣೇಶಗೆ ಪೂಜೆ

## ಡ್ಯಾಂ ಕಾರ್ಯ ಚಿತ್ರೀಕರಣದಕ್ಕೆ ಮಾಧ್ಯಮಗಳನ್ನು ದೂರವಿಟ್ಟ ಟಿಬಿಮಂಡಳಿ ವಿರುದ್ಧ ರೈತರ ಸಂಘಟನೆ ಆಕ್ರೋಶ



**ಹಂಪಿ ಟೈಮ್ಸ್ ಹೊಸಪೇಟೆ**

ತುಂಗಭದ್ರಾ ಡ್ಯಾಂನ 19ನೇ ಕ್ರಸ್ಟ್‌ಗೇಟ್ ದುರಸ್ತಿ ಕಾರ್ಯಕ್ಕೆ ಯವುದೇ ವಿಘ್ನಗಳು ಎದುರಾಗದೇ, ಸ್ಟಾಪ್ ಲಾಕ್ ಗೇಟ್ ಅಳವಡಿಕೆ ಕಾರ್ಯ ಸುಸೂತ್ರವಾಗಿ ನಡೆದು ಯಶಸ್ವಿಗೊಳಿಸಬೇಕೆಂದು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ವಿಜಯ ಮಹಾಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆಯನ್ನು ನೆರವೇರಿಸಲಾಯಿತು.

ತುಂಗಭದ್ರಾ ಜಲಾಶಯ ಭರ್ತಿಯಾದ ಕೂಡಲೇ ಬಾಗೀನ ಅರ್ಪಿಸುವುದು ಸಂಪ್ರದಾಯವಾಗಿದೆ. ಆದರೆ ಈ ಬಾರಿ ಬಾಗೀನ ಅರ್ಪಿಸಲು ಟಿಬಿ ಮಂಡಳಿ ಅಧಿಕಾರಿಗಳು ನಿರಾಕರಿಸಿ, ಮುಂದೂಡಿದ್ದಾರೆ. ಅಲ್ಲದೆ ರಾಜ್ಯ ಸರ್ಕಾರ ನಿರ್ವಹಣೆಗಾಗಿ ನೀಡುವ ಹಣ ದುರ್ಬಳಕೆಯಾಗಿದ್ದರಿಂದ ಡ್ಯಾಂ ಗೇಟ್ ಕಳಚಿಬಿದ್ದಿದೆ. ಕರ್ನಾಟಕ ಮತ್ತು ಟಿ.ಬಿ.ಬೋರ್ಡ್‌ನ ಅಧಿಕಾರಿಗಳನ್ನು ಕೂಡಲೇ ಅಮಾನತ್ತು ಮಾಡಬೇಕು. 6 ದಿನಗಳಿಂದ 35ಟಿ.ಎಂ.ಸಿ. ನೀರು ಹರಿದು ಹೋಗಿದ್ದು 4-ಜಿಲ್ಲೆಗಳು ಮತ್ತು 3-ರಾಜ್ಯಗಳ ರೈತರಿಗೆ ಜೀವನಾಡಿಯಾಗಿರುವ ತುಂಗಭದ್ರ ನೀರು ಉಳಿಸುವಲ್ಲಿ ಅಧಿಕಾರಿಗಳು ನಿರ್ಲಕ್ಷವಹಿಸಿದ್ದಾರೆ. ಡ್ಯಾಂ ಪರಿಸ್ಥಿತಿ ವೀಕ್ಷಣೆಗೂ ರಾಜಕಾರಣಿಗಳಿಗೆ ಮಾತ್ರ ಪ್ರವೇಶ ಕಲ್ಪಿಸಿ, ಮಾಧ್ಯಮಗಳನ್ನು ದೂರವಿಟ್ಟಿರುವುದು ಹಲವು ಅನುಮಾನಗಳನ್ನು ಹುಟ್ಟುಹಾಕಿದೆ ಎಂದು ಸಂಘಟನೆಯ ರೈತ ಮುಖಂಡರು ಆಕ್ರೋಶ ವ್ಯಕ್ತಪಡಿಸಿ, ಟಿ.ಬಿ.ಬೋರ್ಡ್‌ಗೆ ಕರ್ನಾಟಕ, ಆಂಧ್ರ, ತೆಲಂಗಾಣದ ರಾಜ್ಯದ ಹೊರತಾಗಿ ಇರುವ ಕಾರ್ಯದರ್ಶಿಗಳನ್ನು ನೇಮಕ ಮಾಡಬೇಕು. ಆದರೆ ಪ್ರತಿಬಾರಿಯೂ ಆಂಧ್ರದವರನ್ನು ಕಾರ್ಯದರ್ಶಿಯನ್ನಾಗಿ ಮಾಡುವುದು ಬೇಡ ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ, ವಿಜಯನಗರ ಜಿಲ್ಲಾಧ್ಯಕ್ಷ ಟಿ.ನಾಗರಾಜ್, ಬಳ್ಳಾರಿ ಜಿಲ್ಲಾಧ್ಯಕ್ಷ ಬಿ.ವಿ.ಗೌಡ, ಹೊಸಪೇಟೆ ತಾಲೂಕು ಅಧ್ಯಕ್ಷ ಸಣ್ಣಕ್ಕಿ ರುದ್ರಪ್ಪ, ಜಿಲ್ಲಾ ಗೌರವಾಧ್ಯಕ್ಷ ರೇವಣಸಿದ್ದಪ್ಪ.ಹೆಚ್.ಎಸ್, ಪದಾಧಿಕಾರಿಗಳಾದ ವಿರುಪಣ್ಣ, ಗಾಳೆಪ್ಪ, ಹೆಚ್.ಸತೀಶ್ ಇತರರಿದ್ದರು.

# ಸಕಾಲಕ್ಕೆ ಮಳೆ, ಬೆಳೆ ಕರುಣಿಸಲೆಂದು ವರಮಹಾಲಕ್ಷ್ಮೀ ಪೂಜೆ



**ಹಂಪಿ ಟೈಮ್ಸ್ ಕೂಡ್ಲಿಗಿ**

ನಾಡಿಗೆ ಸಕಾಲದಲ್ಲಿ ಉತ್ತಮ ಮಳೆಯಾಗಿ ರೈತರ ಬೆಳೆ ಸಮೃದ್ಧಿಯಾಗಿ ಜನ, ಜಾನುವಾರು ರೋಗ ಮುಕ್ತವಾಗಿರಲಿ ಎಂದು ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ಸಂತೋಷ ಕುಮಾರ್ ತಿಳಿಸಿದರು.

ಪಟ್ಟಣದ ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಕಚೇರಿಯಲ್ಲಿ ಶುಕ್ರವಾರ ವರ ಮಹಾಲಕ್ಷ್ಮಿ ಪೂಜಾ ಕಾರ್ಯಕ್ರಮದಲ್ಲಿ ಮಾತನಾಡಿದರು. ಈಗಾಗಲೇ ತಾಲೂಕಿನಾದ್ಯಂತ ಸಕಾಲಕ್ಕೆ ಉತ್ತಮ ಮಳೆಯಾಗಿ, ಕೆರೆ, ಕಟ್ಟೆಗಳು ನೀರಿನಿಂದ ಭರ್ತಿಯಾಗಿದ್ದು, ರೈತರ ಎಲ್ಲಾ ಪೈರುಗಳು ಸಮೃದ್ಧವಾಗಿ ಬೆಳೆದು ನಿಂತಿವೆ. ತಾಯಿ ವರ ಮಹಾಲಕ್ಷ್ಮಿ ಕೃಪೆಯಿಂದ ಮುಂದಿನ ದಿನಗಳಲ್ಲಿ ಇನ್ನೂ ಉತ್ತಮ ಮಳೆಯಾಗಿ, ರೈತರ ಎಲ್ಲಾ ಬೆಳೆಗಳಿಗೂ ಅನುಕೂಲವಾಗಿ ಸಮೃದ್ದ ಫಸಲು ರೈತರ ಕೈಸೇರಬೇಕು. ಇದರಿಂದ ನಾಡು ಸುಭೀಕ್ಷೆಯಾಗುವುದಲ್ಲದೆ, ನಾಡಿನ ಎಲ್ಲಾ ವ್ಯವಹಾರಗಳು ಉತ್ತಮ ರೀತಿಯಲ್ಲಿ ನಡೆಯುತ್ತವೆ ಎಂದು ಆಶಯ ವ್ಯಕ್ತಪಡಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ತಾಲೂಕು ಲೆಕ್ಕಪರಿಶೋಧಕಿ ಅಶ್ವಿನಿ, ಜ್ಞಾನವಿಕಾಸ ಸಮನ್ವಯಾಧಿಕಾರಿ ರೇಖಾ ನೀರಲಕೇರಿ, ಮೇಲ್ವಿಚಾರಕರಾದ ಜ್ಯೋತಿಗುಡಿ, ರೇಣುಕಾ, ಮಹಾಲಿಂಗಯ್ಯ, ಎಂ.ಎಫ್.ರೇವಣ್ಣ, ಪ್ರಕಾಶ್, ಮಲ್ಲಪ್ಪ, ನಿಂಗರಾಜು, ಭವಾನಿ, ಅನಿಲ್, ಮಂಜುನಾಥ್, ಪ್ರಕಾಶ್, ಬದ್ರಿನಾಥ್ ಇದ್ದರು.


Print & Digital Ads
Book @ Economical rates
Hosapete-Vijayanagara Dist.

HAMPI TIMES VIJAYANAGARA

ನಂ.1 ಸ್ಥಳೀಯ ದಿನಪತ್ರಿಕೆ
ಹಂಪಿ ಟೈಮ್ಸ್
ದಿನಪತ್ರಿಕೆಯಲ್ಲಿ ಜಾಹೀರಾತು ನೀಡಿ
ಅತ್ಯಧಿಕ ಓದುಗರನ್ನು ತಲುಪಿ

- Recruitment job
- Tender/Notice
- Change of name
- Matrimonial
- obituary (Death announcement)
- Businesses
- Education
- Property Real Estate
- Lost and found
- Marriage Bureau
- Remembrance
- Service
- Retail/shopping
- Personnel Announcement
- Computers and Hardware
- Astrology
- Loan /Finance
- Vehicle Automobiles
- Tours and Travels

Education is the most powerful weapon which you can use to change the world
- Nelson Mandela

M:94486 33038
Visit Us
www.hampitimes.com/epaper.hampitimes.com

ನಮ್ಮ ಶಾಲೆ ನಮ್ಮ ದೇಗುಲ: ಸರ್ಕಾರಿ ಶಾಲೆಗಳು ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ತುಂಬುವ ಪವಿತ್ರ ಸ್ಥಳ, ಶಾಲೆಗಳ ಸ್ವಚ್ಛತೆ, ಸಂರಕ್ಷಣೆ ನಮ್ಮೆಲ್ಲರ ಹೊಣೆ. ಬನ್ನಿ ಕೈಜೋಡಿಸಿ...

ಹಂಪಿ ಟೈಮ್ಸ್ HAMPI TIMES

## ವಿಜ್ಞಾನ

### ಉಪ್ಪಿನಕಾಯಿಯನ್ನು ಲೋಹದ ಪಾತ್ರೆಯಲ್ಲಿ ಏಕೆ ಸಂಗ್ರಹಿಸುವುದಿಲ್ಲ?

■ ಆರ್.ಬಿ.ಗುರುಬಸವರಾಜ

ಅಮ್ಮ ಉಪ್ಪಿನಕಾಯಿ ತಯಾರಿಸಲು ನಿಂಬೆ ಹೋಳುಗಳನ್ನು ಕತ್ತರಿಸುತ್ತಿದ್ದಳು. ಅಲ್ಲಿಗೆ ಬಂದ ಸುಮಲತ "ಯಾಕಮ್ಮಾ. ಇಷ್ಟೊಂದು ಹೋಳುಗಳನ್ನು ಕತ್ತರಿಸಿರುವೆ?" ಎಂದಳು. 'ಉಪ್ಪಿನಕಾಯಿ ತಯಾರಿಸಬೇಕಲ್ಲವೇ? ಅದಕ್ಕೆ ಇಷ್ಟೊಂದು ಹೋಳುಗಳನ್ನು ಕತ್ತರಿಸಿರುವೆ' ಎಂದಳು ಅಮ್ಮ. ಅಷ್ಟಕ್ಕೆ ಸುಮ್ಮನಾಗದ ಸುಮಲತ "ಅಮ್ಮಾ, ಉಪ್ಪಿನಕಾಯಿಯನ್ನು ಲೋಹದ ಪಾತ್ರೆಯಲ್ಲಿ ಯಾಕೆ ಸಂಗ್ರಹಿಸುವುದಿಲ್ಲ" ಎಂದು ಬಹುದಿನದ ಪ್ರಶ್ನೆ ಕೇಳಿದಳು. ಅದಕ್ಕೆ ಅಮ್ಮನ ಉತ್ತರ ಹೀಗಿತ್ತು.

ಉಪ್ಪಿನಕಾಯಿ ಹುಳಿ ರುಚಿ ಹೊಂದಿರುತ್ತದೆ ಎಂದು ನಿನಗೆ ಗೊತ್ತಿದೆ. ಹುಳಿರುಚಿ ಹೊಂದಿರುವ ಯಾವುದೇ ಆಹಾರ ಪದಾರ್ಥಗಳನ್ನು ಲೋಹದ ಪಾತ್ರೆಗಳಲ್ಲಿ ದೀರ್ಘಕಾಲದವರೆಗೆ ಸಂಗ್ರಹಿಸಲು ಸಾಮಾನ್ಯವಾಗಿ ಶಿಫಾರಸು ಮಾಡುವುದಿಲ್ಲ. ಏಕೆಂದರೆ ಉಪ್ಪಿನಕಾಯಿಯಂತಹ ಹುಳಿರುಚಿ ಹೊಂದಿರುವ ಆಹಾರ ಪದಾರ್ಥಗಳು ಆಮ್ಲೀಯ ಗುಣವನ್ನು ಹೊಂದಿರುತ್ತವೆ.



ಆಮ್ಲಗಳನ್ನು ಲೋಹಗಳಲ್ಲಿ ಸಂಗ್ರಹಿಸಿದರೆ ಲೋಹದೊಂದಿಗೆ ವರ್ತಿಸಿ ಆಮ್ಲೀಯ ಆಕ್ಸೈಡ್ ಗಳನ್ನು ಉಂಟು ಮಾಡುತ್ತವೆ. ಇದರಿಂದಾಗಿ ಲೋಹವು ತುಕ್ಕು ಹಿಡಿಯುತ್ತದೆ ಮತ್ತು ತುಕ್ಕು ಉಪ್ಪಿನಕಾಯಿಗೆ ಸೇರಿಕೆ ಯಾಗುವಂತೆ ಮಾಡುತ್ತದೆ. ಉಪ್ಪಿನಕಾಯಿಯಲ್ಲಿನ ಆಮ್ಲವು ಲೋಹದ ಅಯಾನುಗಳೊಂದಿಗೆ ಸಂಯೋಗ ಹೊಂದಿ ಉಪ್ಪಿನಕಾಯಿಯನ್ನು ಕಲುಷಿತಗೊಳಿಸುತ್ತದೆ. ಇದು ಉಪ್ಪಿನಕಾಯಿಯ ರುಚಿ ಮತ್ತು ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ ಉಪ್ಪಿನಕಾಯಿ ಅಥವಾ ಹುಳಿರುಚಿ ಹೊಂದಿದ ಆಹಾರ ಪದಾರ್ಥಗಳು ಹಾಳಾಗುತ್ತವೆ. ಸಾಮಾನ್ಯವಾಗಿ ಉಪ್ಪಿನಕಾಯಿಗೆ ವಿನೆಗರ್, ಉಪ್ಪು ಮತ್ತು ಇನ್ನಿತರೇ ಲವಣಗಳನ್ನು ಸೇರಿಸಲಾಗಿರುತ್ತದೆ. ಲವಣಗಳು ಕೆಲವು ಲೋಹಗ ಳೊಂದಿಗೆ ರಸಾಯನಿಕ ಪ್ರತಿಕ್ರಿಯೆ ನಡೆಸುತ್ತವೆ. ಇದು ಉಪ್ಪಿನಕಾಯಿಯಲ್ಲಿ ಬಣ್ಣ ಅಥವಾ ಇತರ ಅನಪೇಕ್ಷಿತ ಪರಿಣಾಮಗಳನ್ನು ಉಂಟುಮಾಡುತ್ತದೆ.

ಉಪ್ಪಿನಕಾಯಿಗಳನ್ನು ಗಾಜಿನ ಜಾಡಿಗಳಲ್ಲಿ ಅಥವಾ ಉತ್ತಮ ಆಹಾರ ದರ್ಜೆಯ ಪ್ಲಾಸ್ಟಿಕ್ ಪಾತ್ರೆಗಳಲ್ಲಿ ಸಂಗ್ರಹಿಸಲಾಗುತ್ತದೆ. ಹಿಂದಿನ ಕಾಲದಲ್ಲಿ ಮಣ್ಣಿನ ಮಡಿಕೆಗಳು ಅಥವಾ ಪಿಂಗಾಣಿ ಜಾಡಿಗಳಲ್ಲಿ ಉಪ್ಪಿನಕಾಯಿಯನ್ನು ಸಂಗ್ರಹಿಸಲಾಗುತ್ತಿತ್ತು. ಇತ್ತೀಚಿನ ದಿನಗಳಲ್ಲಿ ನವೀನ ತಂತ್ರಜ್ಞಾನಾಧಾರಿತ ಪಾತ್ರೆಗಳು ಲಭ್ಯ ಇವೆ. ಅದರಲ್ಲೂ ವಿಶೇಷವಾಗಿ ಆಮ್ಲೀಯ ಆಹಾರವನ್ನು ಸಂಗ್ರಹಿಸಲು ವಿನ್ಯಾಸಗೊಳಿಸಲಾದ ಪಾತ್ರೆಗಳು ದೊರೆಯುತ್ತವೆ. ಈ ಪಾತ್ರೆಗಳು ಆಮ್ಲದೊಂದಿಗೆ ಪ್ರತಿಕ್ರಿಯಾತ್ಮಕವಲ್ಲ ಮತ್ತು ಉಪ್ಪಿನಕಾಯಿಯ ರುಚಿ ಅಥವಾ ಗುಣಮಟ್ಟದ ಮೇಲೆ ಯಾವುದೇ ಅಡ್ಡ ಪರಿಣಾಮ ಬೀರುವುದಿಲ್ಲ.

### ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

### ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ನಾನು... ನಾನು ಯಾರು..?

■ ರಾಜ್‌ಶೇಖರ್
shekarraaj7@gmail.com

ನಾನು ಮಾನವ, ನಾನು ಗಂಡು, ನಾನು ಹೆಣ್ಣು, ನಾನು ವೈದ್ಯ, ನಾನು ಇಂಜಿನಿಯರ್, ನಾನು ಸಾಹಿತಿ, ನಾನು ಪತ್ರಕರ್ತ, ನಾನು ಶಿಕ್ಷಕ, ನಾನು ವಿದ್ಯಾರ್ಥಿ, ನಾನು ರಾಜಕಾರಣಿ, ನಾನು ವ್ಯಾಪಾರಿ.. ಹೀಗೆ ಇತ್ಯಾದಿ, ಇತ್ಯಾದಿ.. ಮೇಲಿನವೆಲ್ಲ ನಾವು ಮಾಡುವ ವೃತ್ತಿಗಳು, ಅಥವಾ ನಮ್ಮ ಪ್ರವೃತ್ತಿಗಳು. ನಮ್ಮ ವೃತ್ತಿಯಲ್ಲಿ ಕರ್ತವ್ಯ ಮುಖ್ಯ, ಪ್ರವೃತ್ತಿಯಲ್ಲಿ ನಮ್ಮ ಹವ್ಯಾಸ ಮುಖ್ಯ. ವೃತ್ತಿ ನಮ್ಮ ಜೀವನಾಧಾರ, ಪ್ರವೃತ್ತಿ ನಮ್ಮ ಹವ್ಯಾಸ ಮತ್ತು ನಮ್ಮ ಸಂತೃಪ್ತಿ (ಹಲವೊಮ್ಮೆ ಅದೇ ವೃತ್ತಿಯಾಗಿ ಜೀವನಕ್ಕೆ ಆಧಾರವಾಗಬಹುದು) ನಮ್ಮ ವೃತ್ತಿಯಲ್ಲಿ ನಮ್ಮ ತನವನ್ನು ಕಾಣಲಾಗುವುದಿಲ್ಲ. ಪ್ರವೃತ್ತಿಯಲ್ಲಿ ನಮ್ಮ ಕೌಶಲ್ಯವನ್ನು ಕಾಣಬಹುದು.

ಹಾಗಾದರೆ ನಾವು ಯಾರು..? ಅಧ್ಯಾತ್ಮ ವಿಜ್ಞಾನ ಪ್ರಕಾರ ನಾವು ಯಾರು ಅಲ್ಲ, ಈ ದೇಹ ನಶ್ವರ... ಇದು ಸತ್ಯವು ಹೌದು. ಆದರೆ....! ಇದರ ಇನ್ನೊಂದು ಮುಖವಾಗಿ ವಾಸ್ತವದಲ್ಲಿ ಭೌತಿಕವಿಜ್ಞಾನ, ಜೀವವಿಜ್ಞಾನ ಹಾಗು ಮನೋವಿಜ್ಞಾನ ಪ್ರಕಾರವಾಗಿ ಅವಲೋಕನ ಮಾಡಿದಾಗ ಈ ಪ್ರಶ್ನೆಗೆ ಉತ್ತರ ಹೀಗೆ ಇರಬಹುದೇ.? ನಾವು ಯಾರೆಂದರೆ..? ನಾವು ನಮ್ಮ ವ್ಯಕ್ತಿತ್ವ. ನಮ್ಮ ವ್ಯಕ್ತಿತ್ವ ನಮ್ಮ ನಡುವಳಿಕೆ. ನಮ್ಮ ನಡುವಳಿಕೆ ನಮ್ಮ ಸಾಮಾಜಿಕ ಸ್ಥಾನಮಾನ. ನಾವು ಮಾಡುವ ಹುದ್ದೆಯಿಂದ ಗೌರವ ಸಿಗುವುದು ಬೇರೆ. ನಮ್ಮ ನಡುವಳಿಕೆಯಿಂದ ಸಿಗುವ ಗೌರವ ಬೇರೆ. ನಮ್ಮ ಹುದ್ದೆ ನಮ್ಮ ಕರ್ತವ್ಯ, ನಮ್ಮ ಜೀವನಕ್ಕೆ ಆಧಾರ. ನಮ್ಮ ನಡುವಳಿಕೆ ನಮ್ಮ ಜೀವನಕ್ಕೆ ಶೋಭೆ. ವ್ಯಕ್ತಿತ್ವ ರೂಪಗೊಳುವುದು ನಮ್ಮ ಆಲೋಚನೆಗಳಿಂದ.. ಹಾಗಾಗಿ ನಾನು ಯಾರು ಎನ್ನುವ ಪ್ರಶ್ನೆಗೆ ಉತ್ತರ ಹೀಗಿರಬಹುದೇ.? ನನ್ನ ಒಟ್ಟು ಆಲೋಚನೆಗಳ ಸಮೂಹ ನನ್ನ ವ್ಯಕ್ತಿತ್ವ. ಮಾನವನ ಜೀವನ ನಡೆಯುವುದೇ ಆಲೋಚನೆಗಳಿಂದ. ಹಾಗಂತ ಎಲ್ಲಾ ಆಲೋಚನೆಗಳು ಮುಖ್ಯ ವಾಗುವುದಿಲ್ಲ.. ಒಬ್ಬ ಮನುಷ್ಯನಿಗೆ ಒಂದು ದಿನಕ್ಕೆ ಸರಾಸರಿ 30,000 ದಿಂದ 40,000 ಆಲೋಚನೆಗಳು ಬರುತ್ತವೆ ಎಂದು ಸಂಶೋಧನೆ ಹೇಳುತ್ತದೆ. ಇದರಲ್ಲಿ ಶೇ 90 ಭಾಗ ವ್ಯರ್ಥ ಆಲೋಚನೆಗಳು. ನಮ್ಮ ಶಕ್ತಿಯನ್ನು ವ್ಯರ್ಥ ಆಲೋಚನೆಗಳಿಗೆ ವ್ಯಯ ಮಾಡಿದಂತೆ. ನಮ್ಮ ಶಕ್ತಿ ಉಪಯುಕ್ತ ಆಲೋಚನೆಗೆ ಬಳಸಿದರೆ ಅದ್ಭುತ ಫಲಿತಾಂಶ ಬರುತ್ತದೆ ಎಂದು ಎಲ್ಲರಿಗೂ ಗೊತ್ತಿರುವ ವಿಷಯ. ಪ್ರತಿ ಆವಿಷ್ಕಾರಗಳಿಗೂ ಆಲೋಚನೆಯೇ ಮೂಲ. The world is made out of thoughts ಎಂದು ಹೇಳಲಾಗುತ್ತದೆ.

ವಿಶ್ವವು ಅನಂತವಾಗಿದ್ದು ಅದರಲ್ಲಿ ಮನುಷ್ಯನ ಪಾತ್ರ ಭೌತಿಕವಾಗಿ ತುಂಬಾ ಕಿರಿಮೆ. ಭೌತಿಕವಾಗಿ ನಾವುಗಳು ಒಂದು ಅಣುವಿನ ಗಾತ್ರದಷ್ಟೇ. ಅಥವಾ ಅದಕ್ಕೂ ಕ್ಷೀಣ. ಅದರೆ ಅದೇ ಮನುಷ್ಯ ಈ ವಿಶ್ವದಲ್ಲಿ ಪ್ರಭಾವಶಾಲಿಯೂ ಹೌದು. ತನ್ನ ಆಲೋಚನಾ ಶಕ್ತಿಯಿಂದ ಅನಂತ ವಿಶ್ವದಲ್ಲಿ ತನ್ನದೇ ಹಿರಿಮೆಯನ್ನು ಹೊಂದಿದ್ದಾನೆ. ಅದಕ್ಕೆ ಕಾರಣ ಅವನ ಮೆದುಳಿನಲ್ಲಿ ಹುಟ್ಟುವ ಅದ್ಭುತ ಆಲೋಚನೆಗಳನ್ನು ಕಾರ್ಯರೂಪಗೊಳಿಸಿರುವುದು. ಆಲೋಚನೆ ಹುಟ್ಟುವುದು ಚಿಕ್ಕದಾದ ಮೆದುಳಿನಲ್ಲಿ. ಆ ಮೆದುಳಿನ ಆಲೋಚನಾ ಕ್ರಮದಿಂದಲೇ ಈ ಅನಂತ ವಿಶ್ವದ ಉಗಮ, ರಚನೆ, ಆಗು, ಹೋಗುಗಳ ಬಗ್ಗೆ ತಿಳಿದುಕೊಂಡಿದ್ದಾನೆ. ಮೆದುಳು– ಮಾನವ ದೇಹದ ಈ ಅಂಗ ಅತ್ಯಂತ ಶಕ್ತಿಯುತ ಮತ್ತು ಪ್ರತಿ ಮನುಷ್ಯನ ನಡುವಳಿಕೆ, ಬುದ್ದಿವಂತಿಕೆಗೆ ಅದು ಪ್ರಭಾವಶಾಲಿ. ಮೆದುಳಿನ ಆಲೋಚನೆಯಿಂದಲೇ ಮನುಷ್ಯನ ಆಸ್ತಿತ್ವಕ್ಕೆ ಒಂದು ನಿದರ್ಶನ ಎಂದು ಹೇಳಬಹುದು.

**ಮೆದುಳು :** ನಮ್ಮ ದೇಹದ ಒಟ್ಟು ತೂಕದ ಶೇ 2 ರಷ್ಟು. ನಮ್ಮ ದೇಹ ಶಕ್ತಿಯ ಶೇ 20 ರಷ್ಟು ಅದು ತನ್ನ ಆಲೋಚನೆಗಳಿಗೆ ಬಳಸುತ್ತದೆ. ಮೆದುಳಿನ ರಚನೆ ನ್ಯೂರಾನ್ ಎಂಬ ಜೀವಕೋಶಗಳಿಂದ ಕೂಡಿದೆ. ಈ ನ್ಯೂರಾನ್ ಗಳು ನರಮಂಡಲದ ಜೀವಕೋಶಗಳೂ ಹೌದು. ಮೆದುಳು ಸುಮಾರು 100 ಬಿಲಿಯನ್ ( ಒಂದು ಬಿಲಿಯನ್ ಅಂದರೆ 100 ಕೋಟಿ )ನ್ಯೂರಾನ್ ಗಳನ್ನು ಹೊಂದಿದೆ. ಮೆದುಳು ಈ ನ್ಯೂರಾನ್ ಗಳ ಮೂಲಕ ದೇಹದ ಎಲ್ಲಾ ಭಾಗಗಳಿಗೆ ಸಂದೇಶ ಕಳಿಸುತ್ತದೆ ಮತ್ತು ಸಂದೇಶ ಪಡೆಯುತ್ತದೆ. ನಾವು ಮಾತನಾಡಲು, ನಡೆದಾಡಲು, ತಿನ್ನಲು, ಉಸಿರಾಡಲು ಮೆದುಳುನಿಂದ ನ್ಯೂರಾನ್ ಗಳ ಮೂಲಕ ಸಂದೇಶ ರವಾನೆಯಾಗುತ್ತದೆ. ಇನ್ನು ಮೆದುಳು ಒಂದು ಚಿಕ್ಕ ಬಲ್ಬ್ ಬೆಳಗುವಷ್ಟು ವಿದ್ಯುತ್ ಶಕ್ತಿ ತಯಾರಿಸಬಲ್ಲದು. ಹಾಗೆಯೇ ಮೆದುಳು ಹೇಗೆ ಆಲೋಚನೆಗಳಿಗೆ ಜನಕವೋ ಹಾಗೆಯೇ ಅದು




ನೆನಪಿನ ಶಕ್ತಿಗೂ ವೇದಿಕೆ.

ಮೆದುಳಿನ ನೆನಪಿನ ಶಕ್ತಿ (ನಮ್ಮ ಕಂಪ್ಯೂಟರ್ / ಮೊಬೈಲ್ ಮಾಹಿತಿ ಶೇಖರಣೆ ತರಹ ) 25 ಮಿಲಿಯನ್ ಶತಕೋಟಿ ಬೈಟ್ ನಷ್ಟು. ಬೈಟ್ (byte )ಅನ್ನುವುದು ಮಾಹಿತಿ ಶೇಖರಣೆಯ ಮಾಪನ. ಒಂದು ಬೈಟ್ ಎಂದರೆ (eight bits from one byte) ಕಂಪ್ಯೂಟರ್ ಭಾಷೆಯಲ್ಲಿ ಎಂಟು ಎರಡೆಣಿಕೆಗಳ (0 ಮತ್ತು 1) ಸಂಖ್ಯಾ ವ್ಯವಸ್ಥೆ(binary number system ).

**ಮೆದುಳು ಅರೋಗ್ಯ :** ನಾವು ಯಾವುದೇ ಕೆಲಸ ಮಾಡಲು ಮೆದುಳಿನ ಪಾತ್ರ ಪ್ರಥಮವಾಗಿರುವುದರಿಂದ ಅದರ ಅರೋಗ್ಯವು ಪ್ರಥಮ ಆದ್ಯತೆಯಾಗಬೇಕು. ನಿಯಮಿತ ನಿದ್ರೆ, ವಿಶ್ರಾಂತಿ, ಧ್ಯಾನ ಹಾಗು ಧೀರ್ಘ ಉಸಿರಾಟದಿಂದ ಮೆದುಳು ಚುರುಕಾಗಿ ಕೆಲಸ ಮಾಡಲು ಸಹಾಯ ಮಾಡಬಲ್ಲದು ಎಂದು ಸಂಶೋಧನೆಗಳು ಹೇಳುತ್ತವೆ. ಪ್ರತಿ ಆಲೋಚನೆ ಒಂದು ತರಂಗ ವಾಗಿರುತ್ತದೆ. ಅದಕ್ಕೆ ನಿರ್ದಿಷ್ಟವಾದ ತರಂಗ ದೂರ (wavelength) ಹಾಗೂ ಆವರ್ತನ (frequency) ಇರುತ್ತದೆ ಎಂದು ವಿಜ್ಞಾನ ಹೇಳುತ್ತದೆ. ಯಾವ ಆಲೋಚನೆ ಅತಿ ಹೆಚ್ಚು ಭಾರಿ ಆವರ್ತನ ಗೊಳ್ಳುವುದೋ ಅದು ಶಕ್ತಿಶಾಲಿಯಾಗುತ್ತ ಹೋಗುತ್ತದೆ, ಮತ್ತು ಬಹುದೂರ ಚಲಿಸುತ್ತದೆ ಎಂದು ಬೌದ್ಧಿಕ ವಿಜ್ಞಾನ ಮತ್ತು ಭೌತ ವಿಜ್ಞಾನ ಎರಡು ಹೇಳುತ್ತವೆ. ಮಾನವನ ವಿಕಾಸ ಆರಂಭವಾದಾಗಿನಿಂದಲೂ ಮಾನವ ತನ್ನ ಆಲೋಚನೆ ನಿಲ್ಲಿಸಿಲ್ಲ. ಕಾಲಕ್ಕೆ ಅನುಗುಣವಾಗಿ ಹಂತ ಹಂತವಾಗಿ ಮಾನವನ ನಾಗರೀಕತೆ ಬದಲಾಗುತ್ತಾ ಜೊತೆಗೆ ಜೀವನ ಶೈಲಿ ನವೀನವಾಗಿರಲು ತನ್ನ ಆಲೋಚನಾ ಶಕ್ತಿಯೇ ಕಾರಣ. ಹಾಗೆಯೇ ಪ್ರತಿ ಮನುಷ್ಯನ ಆಲೋಚನಾ ವಿಧಾನ ಅವನ ಜೀವನ ಪರಿಸರ, ಕೌಟುಂಬಿಕ ಹಿನ್ನಲೆ, ಆರ್ಥಿಕ, ಸಾಮಾಜಿಕ ಸ್ಥಿತಿ ಗತಿ ಹಾಗು ಅವರವರ ಅಭಿರುಚಿ ಗಳಿಂದ ಪ್ರಭಾವ ಹೊಂದಿರುತ್ತವೆ.ಹಾಗಾಗಿ ಆಲೋಚನಾ ವಿಧಾನ ಮನುಷ್ಯ ನಿಂದ ಮನುಷ್ಯನಿಗೆ ಭಿನ್ನವಾಗಿರುತ್ತದೆ.

ಮಾನವ ವೈಜ್ಞಾನಿಕವಾಗಿಯೂ, ತಾಂತ್ರಿಕ ವಾಗಿಯೂ, ಶತ ಶತಮಾನಗಳಿಂದಲೂ ಅಧುನೀಕರಣ ಹೊಂದುತ್ತಲೇ ಇದ್ದಾನೆ. ಆದಿಯಿಂದಲೂ, ಮೀನಿನಂತೆ ಈಜುವುದನ್ನ ಕಲಿತ, ಪಕ್ಷಿಯಂತೆ ಹಾರುವುದನ್ನು (ವಿಮಾನ ಪ್ರಯಾಣ ) ಕಲಿತ, ಬಾಹ್ಯಕಾಶದಲ್ಲಿ ಸುತ್ತುವುದನ್ನು ಕಲಿತ. ಆದರೆ ಅದೇ ಮಾನವ ಕ್ರೂರವಾಗಿ ಆಲೋಚಿಸಿ ಹಿಂಸಾತ್ಮಕವಾಗಿ ನಡೆದುಕೊಳ್ಳುವುದನ್ನು ಕಲಿತ. ಮಾನವನ ಆಲೋಚನೆಗಳಲ್ಲಿ ಹಲವು ವಿಧಗಳು. ಸುಖ ಸಂತೋಷ ದಲ್ಲಿನ ಆಲೋಚನೆ. ದುಃಖ ಕೋಪದಲ್ಲಿನ ಆಲೋಚನೆ. ಖಿನ್ನತೆಯಲ್ಲಿನ ಆಲೋಚನೆ, ಉಲ್ಲಾಸದಲ್ಲಿನ ಆಲೋಚನೆ. ಹೀಗೆ ಹಲವಾರು. ಇವೆಲ್ಲವುಗಳ ಸಮ್ಮಿಲನ ಎರಡು ವಿಧದ ಆಲೋಚನೆಗಳು. ಕಟ್ಟುವ ಮತ್ತು ಕೆಡವುವ ಆಲೋಚನೆಗಳು. ಸಕಾರಾತ್ಮಕ (constructive ) ಆಲೋಚನೆಗಳು ಮಾನವನ ಜೀವನವನ್ನು ಆಧ್ಯಾತ್ಮಿಕವಾಗಿ, ಸಾಮಾಜಿಕ ವಾಗಿ, ವೈಜ್ಞಾನಿಕವಾಗಿ, ತಾಂತ್ರಿಕವಾಗಿ ತುಂಬಾ ಪ್ರಗತಿಯತ್ತ ಸಾಗುವಲ್ಲಿ ಯಶಸ್ವಿಯಾಗುತ್ತವೆ ಎಂದು ಅನುಭವಿಗಳು ಹೇಳುತ್ತಾರೆ.

ಅದೇ ನಕಾರಾತ್ಮಕ(destructive) ಆಲೋಚನೆಗಳು ನಮ್ಮ ಮನಸ್ಸನ್ನು ಬರ್ಬರವಾಗಿಸುತ್ತವೆ ಮತ್ತು ನಮ್ಮನ್ನು ವಿನಾಶದತ್ತ ಕೊನೆಗಾಣಿಸುತ್ತದೆ ಎಂಬುದು ಅನುಭವದ ಮಾತುಗಳು. ಯಾವ ಮನುಷ್ಯ ಸ್ಪಷ್ಟ ಹಾಗು ನಿರ್ದಿಷ್ಟವಾದ ಆಲೋಚನೆಗಳನ್ನು ಕಾರ್ಯರೂಪಗೊಳಿಸಿ ಸಮಾಜದಲ್ಲಿ ಯಶಸ್ವಿಯಾಗಿತ್ತಾನೋ ಅವನು ಅಸಾಮಾನ್ಯನಾಗಿಬಿಡುತ್ತಾನೆ. ನಿರ್ದಿಷ್ಟ ಆಲೋಚನೆಗಳು ಇದ್ದು ಕಾರ್ಯರೂಪಗೊಳಿಸುವಲ್ಲಿ ಪ್ರಯತ್ನಿಸುವುದಿಲ್ಲವೋ ಅವರು ಸಾಮಾನ್ಯರಾಗಿಬಿಡುತ್ತಾರೆ. (ideas or thoughts without action no use). ಇಂದಿನ ಈ ತಂತ್ರಜ್ಞಾನ ಯುಗದಲ್ಲಿ, ಜೀವನ ಇಷ್ಟು ಸರಳವಾಗಲು ಮಾನವನ ಆಲೋಚನೆಗಳಿಂದ ಸೃಷ್ಟಿಗೊಂಡ ತಂತ್ರಜ್ಞಾನ ಮತ್ತು ಸಂಶೋಧನೆ ಕಾರಣಗಳು. ತನ್ನ ಆಲೋಚನೆ ಗಳಿಂದ ಸಹಸ್ರಾರು ಕ್ಷೇತ್ರಗಳಿಗೆ ವಿಸ್ತರಿಸುತ್ತ ಜೀವನ ಕ್ರಮವನ್ನು ಮತ್ತಷ್ಟು ಸರಳ ಮತ್ತು ಸುಲಲಿತ ವಾಗಿಸಿಕೊಂಡಿದ್ದಾನೆ. ಮಾನವ ಆಲೋಚನೆಗಳು ಈ ವಿಶ್ವದಷ್ಟೇ ಅನಂತ ಮತ್ತು ಎಂದಿಗೂ ಕೊನೆಗೊಳ್ಳಲಾಗದ್ದು. ಆಲೋಚನೆಗಳು ನಿತ್ಯವೂ ವಿನೂತನ, ವಿಭಿನ್ನ, ಹಾಗು ಅಧುನಿಕವಾಗುತ್ತ ಇರಲಿ ಮತ್ತು ಮಾನವನ ಏಳಿಗೆ ಹೀಗೆ ಎಂದೆಂದಿಗೂ ನಡೆಯುತ್ತಿರಲಿ ಎಂದು ಆಶಿಸುತ್ತಾ...

# ಕೀಮ್ಸ್‌ಗೆ ಮಸಿ ಬಳಿದರೆ ಮುಲಾಜಿಲ್ಲದೇ ಕ್ರಮ

## ಸಚಿವ ಡಾ.ಶರಣಪ್ರಕಾಶ ಪಾಟೀಲ ಹೇಳಿಕೆ | ವೈದ್ಯಕೀಯ ಶಿಕ್ಷಣ ಸಂಸ್ಥೆಯ ಪ್ರಗತಿ ಪರಿಶೀಲನಾ

■ ಹಂಪಿ ಟೈಮ್ಸ್ ಕೊಪ್ಪಳ

ವೈದ್ಯಾಧಿಕಾರಿಗಳ ಮತ್ತು ಸಿಬ್ಬಂದಿ ನೇಮಕಾತಿ ಹಾಗೂ ಸಾಮಗ್ರಿ ಖರೀದಿ ಸೇರಿದಂತೆ ಯಾವುದೇ ವಿಷಯದಲ್ಲಿ ಅವ್ಯವಹಾರಕ್ಕೆ ಅವಕಾಶವಿಲ್ಲದ ಹಾಗೆ ಆಡಳಿತ ನಡೆಸುವ ಮೂಲಕ ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯು ಮಾದರಿಯಾಗಬೇಕು ಎಂದು ವೈದ್ಯಕೀಯ ಶಿಕ್ಷಣ ಸಚಿವರಾದ ಡಾ.ಶರಣಪ್ರಕಾಶ ಪಾಟೀಲ ಅವರು ಹೇಳಿದರು.

ಕೊಪ್ಪಳ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಸಭಾಂಗಣದಲ್ಲಿ ಆಗಸ್ಟ್ 16ರಂದು ಸಂಸ್ಥೆಯ ನಿರ್ದೇಶಕರು, ವಿವಿಧ ವಿಭಾಗಗಳ ಮುಖ್ಯಸ್ಥರು, ವಿವಿಧ ಪ್ರಾಧ್ಯಾಪಕರೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಚಾಲ್ತಿಯಲ್ಲಿರುವ ಕಾಮಗಾರಿಗಳು ಗುಣಮಟ್ಟದ ರೀತಿಯಲ್ಲಿ ನಡೆಯಬೇಕು. ಗುಣಮಟ್ಟದ ವಿಷಯದಲ್ಲಿ ಯಾವುದೇ ರಾಜಿ ಇಲ್ಲ. ಕಳಪೆ ಕಾಮಗಾರಿಯಾಗಿದ್ದರೆ ಗುತ್ತಿಗೆದಾರರಿಗೆ ನೋಟೀಸ್ ಜಾರಿ ಮಾಡಿ. ಸಂಸ್ಥೆಯ ಸುಪರ್ದಿಗೆ ಪಡೆಯುವ ಮೊದಲು ಕಟ್ಟಡದ ಕಾಮಗಾರಿಯ ಗುಣಮಟ್ಟದ ಬಗ್ಗೆ ಪರಿಶೀಲಿಸಿ ಎಂದು ಸಚಿವರು ತಿಳಿಸಿದರು.ಕೊಪ್ಪಳ ಜಿಲ್ಲೆಯು ಬಯಲುಸೀಮೆಯ



ನೆಲವಾಗಿದೆ. ಇಲ್ಲಿನ ಜನರ ಸಾಮಾಜಿಕ ಆರ್ಥಿಕ ಪರಿಸ್ಥಿತಿ ಇನ್ನು ಸುಧಾರಿಸಬೇಕಿದೆ. ಮುಖ್ಯವಾಗಿ ಇಲ್ಲಿನ ಜನತೆಗೆ ಉತ್ತಮವಾದ ಆರೋಗ್ಯ ಸೌಕರ್ಯ ದೊರೆಯಬೇಕಿದೆ. ಕೊಪ್ಪಳ ವೈದ್ಯಕೀಯ ಶಿಕ್ಷಣ ಸಂಸ್ಥೆಯ ಬಗ್ಗೆ ಸಾಕಷ್ಟು ಭರವಸೆ ಇದೆ. ಇದನ್ನು ಅರ್ಥೈಸಿಕೊಳ್ಳಬೇಕು. ಅವ್ಯವಹಾರ ನಡೆಸಿ ಯಾರಾದರು ಸಂಸ್ಥೆಯ ಹೆಸರಿಗೆ ಮಸಿ ಬಳಿದರೆ ಯಾರೇ ಇರಲಿ ಅಂತವರ ವಿರುದ್ಧ ಮುಲಾಜಿಲ್ಲದೇ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸಂಸ್ಥೆಯಲ್ಲಿ ಈಗಾಗಲೇ ರಚನೆಯಾಗಿರುವ ಎಲ್ಲ ಸಮಿತಿಗಳು ಸರಿಯಾಗಿ ಕಾರ್ಯನಿರ್ವಹಿಸಬೇಕು. ಕಾಲೇಜುಗಳಲ್ಲಿ ಪಿಡುಗಾಗಿ ಪರಿಣಮಿಸಿದ ರಾಗಿಂಗಗೆ ಅವಕಾಶ ನೀಡದೆ ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿ ಒತ್ತಡ ಮುಕ್ತ ವಾತಾವರಣ ಇರುವ ಹಾಗೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಬದಲಾದ ಕಾಲಘಟ್ಟದಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಸಾಕಷ್ಟು ಮಹತ್ವ ಬರುತ್ತಿದೆ. ಬಹಳಷ್ಟು ನಿರೀಕ್ಷೆಯೊಂದಿಗೆ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ತೆಗೆದುಕೊಳ್ಳುವ ವಿದ್ಯಾರ್ಥಿಗಳ ಮನೋಭಾವನೆ ಅರಿತು ಅವರಿಗೆ ಗುಣಮಟ್ಟದ ರೀತಿಯ ಬೋಧನಾ ವ್ಯವಸ್ಥೆ ಕಲ್ಪಿಸಬೇಕು ಎಂದು ಸಚಿವರು ಎಲ್ಲ ವಿಭಾಗಗಳ ಮುಖ್ಯಸ್ಥರು ಮತ್ತು ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರಿಗೆ ಸಲಹೆ ಮಾಡಿದರು.

ಸಂಸ್ಥೆಯ ಕಟ್ಟಡ ನಿರ್ಮಾಣ, ಸದ್ಯದ ಪರಿಸ್ಥಿತಿ, ಈ ಹಿಂದೆ ಕರೆದ ಟೆಂಡರಗಳ ಸ್ಥಿತಿಗತಿ ಸೇರಿದಂತೆ ನಾನಾ ವಿಷಯಗಳ ಬಗ್ಗೆ ಸಚಿವರು ಚರ್ಚಿಸಿದರು.

ಕೊಪ್ಪಳ ವೈದ್ಯಕೀಯ ಶಿಕ್ಷಣ ಸಂಸ್ಥೆಗೆ ಒಟ್ಟು 81 ಹುದ್ದೆಗಳು ಮಂಜೂರಾಗಿವೆ. ಈ ಪೈಕಿ ಈಗಾಗಲೇ 49 ಹುದ್ದೆಗಳು ಭರ್ತಿಯಾಗಿವೆ. 32 ಹುದ್ದೆಗಳು ಖಾಲಿ ಇವೆ ಎಂದು ಸಂಸ್ಥೆಯ ನಿರ್ದೇಶಕರಾದ ವಿಶ್ವನಾಥ ಇಟಗಿ ಅವರು ಮಾಹಿತಿ ನೀಡಿದರು.

ಸಭೆಯಲ್ಲಿ ಸಂಸದರಾದ ರಾಜಶೇಖರ ಹಿಟ್ನಾಳ, ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ, ಹೇಮಲತಾ ನಾಯಕ, ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರಾದ ಸುಜಾಥಾ ರಾಠೋಡ, ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಉಪಸ್ಥಿತರಿದ್ದರು.

ಕವಿ ಮನಸು

## ವರ ಮಹಾಲಕ್ಷ್ಮೀ



ಕರವ ಮುಗಿದು ಬೇಡುವೆ
ಹರಸು ಸಿರಿಲಕುಮಿ
ಬರಿದಾದ ಬಾಳಿಗೆ ಭಾಗ್ಯ
ತೋರು ವರಲಕುಮಿ॥

ತರ ತರದ ಹೂವನಿಟ್ಟು
ತಾಯಿ ಸಿಂಗರಿಸುವೆ
ಅರಿಶಿಣ ಕುಂಕುಮವಿಟ್ಟು
ಭಕ್ತಿಯಲಿ ನಮಿಸುವೆ॥

ನವಿರಾದ ಸೀರೆಯುಡಿಸಿ
ಅಲಂಕಾರ ಮಾಡುವೆ
ಸಿಹಿ ತಿನಿಸು ನೈವೇದ್ಯಗೈದು
ತುಪ್ಪದಾರತಿ ಬೆಳಗುವೆ॥

ಭಯ ಭಕುತಿಯಲಿ ಬಾಗಿಣ
ನೀಡಿ ಆರಾಧಿಸುವೆ
ಜಯ ಜಯ ದೇವಿಯೆಂದು
ನಾಮವ ಜಪಿಸುವೆ॥

ಸಿರಿಯ ದೇವಿಯೇ ಸಹಸ್ರ
ಅರ್ಚನೆಯ ಸ್ವೀಕರಿಸು
ಕರುಣೆಯಿಂದಲೇ ಜಗದ
ಕಷ್ಟವನು ನೀಗಿಸು॥

ಶರಣು ಬಂದೆನು ಲಕುಮಿ
ಬಾಳು ಹಸನಗೊಳಿಸು
ಪರಿಪರಿಯಲಿ ಪೂಜಿಸುವೆ
ನಿತ್ಯವೂ ಅವತರಿಸು॥

– ಲತಾ ಕೆ.ಎಸ್.ಹೆಗಡೆ ಬೆಂಗಳೂರು

## ಮರೆಯಾಗುವಳೇ ತುಂಗಭದ್ರೆ



ಕಟ್ಟಿದ ಬುತ್ತಿಯದು
ಕಣ್ಣೆದುರಿಗೆ ಹರಿದು
ಮಾಯದ ಮಾಯಕ್ಕೆ
ಮರೆಯಾಗುವಳೇ ತುಂಗಭದ್ರೆ

ಕಳೆದೆರಡು ವರ್ಷದಿಂದ
ವರುಣ ಕೃಪೆಯಾಗಲಿಲ್ಲ
ಈ ವರುಷ ವರುಣ ಬಂದರೂ
ನಿನ್ನೊಡಲ ಬರಿದಾಯ್ತಲ್ಲ

ಒಡಲಿಗೆ ಬರ ಸಿಡಿಲು
ಬಡಿದು ನೀ ನೋವುಣ್ಣುತಿರಲು
ಅಸಹಾಯಕರನ್ನಾಗಿ ನಮ್ಮ
ನೋಡಲು ಬಿಟ್ಟೆಯಾ ತಾಯೀ

ಯಾರ ಕೇಳಲಿ ನಾನು
ಯಾರಿಗೆ ಹೇಳಲಿ ನಾನು
ನಿನ್ನಾಸರೆಯ ಕಳೆದುಕೊಳ್ಳುವ
ಭಯವು ಕಾಡಿರುವುದು ಎನಗೆ

ಹತ್ತು ಹಲವಾರು ಹಕೀಮರು
ಮತ್ತೆ ಸುಪ್ರಸಿದ್ದರು ಬಂದಿಹರು
ನಿನ್ನೊಡಲ ಇಲಾಜು ಸಲುವಾಗಿ
ಬೇಡುವೆ ದೇವರಿಗೆ ನಿನ್ನೊಡಲು
ಬೇಗ ಗುಣಮುಖವಾಗಿ

– ಕೆ ಎಂ ಬಸವರಾಜ ಹೊಸಪೇಟೆ

# ಬಡ ವಿದ್ಯಾರ್ಥಿಗಳಿಗೆ ಕೆನರಾ ಬ್ಯಾಂಕ್‌ನಿಂದ ಸ್ಕಾಲರ್‌ಶಿಪ್

## ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಬಿ.ಉಮಾದೇವಿ ಹೇಳಿಕೆ




■ ಹಂಪಿ ಟೈಮ್ಸ್ ಬಳ್ಳಾರಿ

ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ 'ಕೆನರಾ ಬ್ಯಾಂಕ್ ಡಾ.ಅಂಬೇಡ್ಕರ್ ವಿದ್ಯಾ ಜ್ಯೋತಿ ಸ್ಕಾಲರ್‌ಶಿಪ್ ಯೋಜನೆ'ಯು ಅನುಕೂಲವಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಬಿ. ಉಮಾದೇವಿ ಅವರು ಹೇಳಿದರು.

ಬುಧವಾರ ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜ್ ಪಕ್ಕದಲ್ಲಿನ ರುಡ್‌ಸೆಟ್ ಕಚೇರಿಯ ಸಭಾಂಗಣದಲ್ಲಿ ಏರ್ಪಡಿಸಿದ್ದ 'ಕೆನರಾ ಬ್ಯಾಂಕ್ ಡಾ.ಅಂಬೇಡ್ಕರ್ ವಿದ್ಯಾ ಜ್ಯೋತಿ ಸ್ಕಾಲರ್‌ಶಿಪ್ ಯೋಜನೆ'ಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕೆನರಾ ಬ್ಯಾಂಕ್ ಬೆಂಗಳೂರು ಪ್ರಧಾನ ಕಚೇರಿ ವತಿಯಿಂದ 78 ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಪ್ಯಾನ್ ಇಂಡಿಯಾ ಮೆಗಾ ಸಿಎಸ್‌ಆರ್ ಇನಿಶಿಯೇಟಿವ್ ಆಗಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ "ಕೆನರಾ ಬ್ಯಾಂಕ್ ಡಾ. ಅಂಬೇಡ್ಕರ್ ವಿದ್ಯಾ ಜ್ಯೋತಿ ಸ್ಕಾಲರ್‌ಶಿಪ್ ಯೋಜನೆ' ಪರಿಚಯಿಸಿದ್ದು, ಹೆಣ್ಣುಮಕ್ಕಳ ಶಿಕ್ಷಣವನ್ನು ಅರ್ಥಪೂರ್ಣ ಅಭಿವೃದ್ಧಿಗೆ ಮೂಲಭೂತ ಅಗತ್ಯವೆಂದು ಪ್ರಚಾರ ಮಾಡಿದ ಸಂಸ್ಥಾಪಕ ಅಮ್ಮೆಂಬಳ ಸುಬ್ಬಾರಾವ್ ಪೈ ಅವರಿಗೆ ಗೌರವಾರ್ಥವಾಗಿ "ಕೆನರಾ ವಿದ್ಯಾ ಜ್ಯೋತಿ" ಯೋಜನೆಯನ್ನು ಪ್ರಾರಂಭಿಸಲಾಗಿದೆ ಎಂದರು.

ಕೆನರಾಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕ ಡಿ.ವಿ.ಪಿ.ಆರ್.ಮುರಳಿಕೃಷ್ಣ ಅವರು ಮಾತನಾಡಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಸಮುದಾಯಗಳ ಹೆಣ್ಣು ಮಕ್ಕಳ ಶಿಕ್ಷಣವನ್ನು ಉತ್ತೇಜಿಸಲು 78 ನೇ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ 'ಕೆನರಾ ಬ್ಯಾಂಕ್ ಡಾ.ಅಂಬೇಡ್ಕರ್ ವಿದ್ಯಾ ಜ್ಯೋತಿ' ಎಂದು ಮರುನಾಮಕರಣ ಮಾಡಲಾಗಿದೆ ಎಂದು ತಿಳಿಸಿದರು.

2013–14 ರಲ್ಲಿ ಸಿಎಸ್‌ಆರ್ ಉಪಕ್ರಮಗಳ ಅಡಿ ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನವನ್ನು ವಿಸ್ತರಿಸಲು ಪ್ರಾರಂಭಿಸಲಾಯಿತು. ಬರು ಬರುತ್ತಾ 2015–16 ರಿಂದ ಗ್ರಾಮೀಣ, ಅರೆ–ನಗರ ಮತ್ತು ನಗರ ಶಾಖೆಗಳ ಮೂಲಕ ವಿಸ್ತರಿಸಲಾಯಿತು ಎಂದರು.

ಕಳೆದ 11 ವರ್ಷಗಳಲ್ಲಿ 95 ಸಾವಿರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ರೂ.46 ಕೋಟಿ ಮೊತ್ತದೊಂದಿಗೆ ವಿದ್ಯಾರ್ಥಿವೇತನ ಒದಗಿಸಲಾಗಿದೆ. 2023–24 ರವರೆಗೆ 44742 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ರೂ.18 ಕೋಟಿ ನೀಡಿದೆ. ಇದುವರೆಗೆ ಒಟ್ಟು 139742 ಪ್ರಯೋಜನ ಪಡೆದ ವಿದ್ಯಾರ್ಥಿಗಳು, ಒಟ್ಟು ರೂ.64 ಕೋಟಿ ವಿತರಿಸಿದ ಮೊತ್ತವಾಗಿದೆ ಎಂದು ತಿಳಿಸಿದರು.

ಯೋಜನೆಯ ವಿವರ:

ಕೆನರಾ ಬ್ಯಾಂಕ್ ಡಾ.ಅಂಬೇಡ್ಕರ್ ವಿದ್ಯಾ ಜ್ಯೋತಿ ಸ್ಕಾಲರ್‌ಶಿಪ್ ಯೋಜನೆಯಡಿ 2024–25ರ ಸಾಲಿಗೆ ಪ್ರತಿಭಾವಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ನೆರವು ನೀಡಲಾಗುತ್ತಿದೆ ಮತ್ತು ಯೋಜನೆಯನ್ನು >>4

# ರಾಬರ್ಟ್ ಬ್ರೂಸ್ ಫುಟ್ ಸಂಗನಕಲ್ಲು ಪ್ರಾಕ್ತನ ವಸ್ತು ಸಂಗ್ರಹಾಲಯಕ್ಕೆ ಭೇಟಿ

## ಸಚಿವ ಕೃಷ್ಣ ಬೈರೇಗೌಡ ಹೇಳಿಕೆ | ಪ್ರಾಗೈತಿಹಾಸಕ್ಕಾಗಿ ಮೀಸಲಿಟ್ಟ ವಸ್ತು ಸಂಗ್ರಹಾಲಯವಾಗಿದೆ

■ ಹಂಪಿ ಟೈಮ್ಸ್ ಬಳ್ಳಾರಿ



ನಗರದ ಡಾ.ರಾಜ್ ಕುಮಾರ್ ರಸ್ತೆಯ ರಾಬರ್ಟ್ ಬ್ರೂಸ್ ಫುಟ್ ಸಂಗನಕಲ್ಲು ಪ್ರಾಕ್ತನ ವಸ್ತು ಸಂಗ್ರಹಾಲಯಕ್ಕೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಗುರುವಾರ ಭೇಟಿ ನೀಡಿ ವೀಕ್ಷಣೆ ಮಾಡಿದರು.

ರಾಬರ್ಟ್ ಬ್ರೂಸ್ ಫುಟ್ ಸಂಗನಕಲ್ಲು ಪ್ರಾಕ್ತನ ವಸ್ತು ಸಂಗ್ರಹಾಲಯದಲ್ಲಿ ಹಲವಾರು ಪುರಾತನ ಪಳೆಯುಳಿಕೆಗಳನ್ನು ಸಂಗ್ರಹಿಸಲಾಗಿದ್ದು, ಆಕರ್ಷಣೀಯ ವಸ್ತು ಸಂಗ್ರಹಾಲಯಗಳಲ್ಲಿ ಒಂದಾಗಿದೆ. ಹಲವಾರು ವಸ್ತುವಿಷಯಗಳನ್ನು ಒಳಗೊಂಡಿದ್ದು, ವಸ್ತುಸಂಗ್ರಹಾಲಯದ ನಿರ್ವಹಣೆಯು ಅಚ್ಚುಕಟ್ಟಾಗಿದೆ ಎಂದು ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಮಾತನಾಡಿ, ಪ್ರಾಚೀನ ಶಿಲಾಯುಗ ಮತ್ತು ನವಶಿಲಾಯುಗಗಳಿಗೆ ರಾಬರ್ಟ್ ಬ್ರೂಸ್ ಫೂಟ್ ಸಂಗನಕಲ್ಲು ಪುರಾತತ್ವ ವಸ್ತುಸಂಗ್ರಹಾಲಯವು ಶಿಲಾಯುಗದ ಉಪಕರಣಗಳ ವಿಶಿಷ್ಟವಾದ ಇತಿಹಾಸ ಪೂರ್ವ ಮಾಹಿತಿ ಒಳಗೊಂಡಿದೆ. ಶಿಲಾಯುಗದ ಮೇಲೆ ಕೇಂದ್ರೀಕೃತವಾಗಿರುವ ಏಕೈಕ ವಸ್ತು ಸಂಗ್ರಹಾಲಯವು ಇದಾಗಿದೆ ಎಂದು ತಿಳಿಸಿದರು.

ರಾಬರ್ಟ್ ಬ್ರೂಸ್ ಫುಟ್ ಸಂಗನಕಲ್ಲು ಪ್ರಾಕ್ತನ ವಸ್ತು ಸಂಗ್ರಹಾಲಯದ ವಿಶೇಷ: ದೇಶದಲ್ಲಿಯೇ ಪ್ರಾಗೈತಿಹಾಸಕ್ಕಾಗಿ ಮೀಸಲಿಟ್ಟ ಏಕೈಕ ವಸ್ತು ಸಂಗ್ರಹಾಲಯವಾಗಿದೆ. ಪ್ರಪಂಚದ ವಿವಿಧ ದೇಶಗಳಲ್ಲಿ ವಿವಿಧ ಕಾಲಗಟ್ಟಗಳಲ್ಲಿ ದೊರೆತ ತಲೆಬುರುಡೆಗಳು ಮಾದರಿಗಳಿವೆ ಹಾಗೂ ಆಫ್ರಿಕಾದಲ್ಲಿ ಸಿಕ್ಕಂತಹ ಶಿಲಾ ಉಪಕರಣಗಳ ಮಾದರಿಗಳು ಇವೆ.

ಬಳ್ಳಾರಿ ವಲಯ ಪೊಲೀಸ್ ಮಹಾನಿರೀಕ್ಷಕ ಬಿ.ಎಸ್.ಲೋಕೇಶ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ.ವಿ.ಜೆ., ತಹಶೀಲ್ದಾರ ಗುರುರಾಜ, ಪ್ರಾಕ್ತನ ವಸ್ತು ಸಂಗ್ರಹಾಲಯದ ಸದಸ್ಯ ಸಂತೋಷ್ ಮಾರ್ಟಿನ್, ಅಹಿರಾಜ್, ತಾಂತ್ರಿಕ ಸಹಾಯಕ ಗೌರಿ ಸೇರಿದಂತೆ ಇತರರು ಇದ್ದರು.

# ಗ್ರಾಮೀಣ ಸಮಸ್ಯೆಗಳಿಗೆ ಪರಿಹಾರ ಒದಗಿಸಿ

## ಮಾಜಿ ಜಿಪಂ ಸದಸ್ಯ ಅಕ್ಕಿ ತೋಟೇಶ್ ನೇತೃತ್ವದ ತಂಡ ಒತ್ತಾಯ



■ ಹಂಪಿ ಟೈಮ್ಸ್ ಹೊಸಪೇಟೆ

ಹಗರಿಬೊಮ್ಮನಹಳ್ಳಿ ತಾಲೂಕಿನ ಮಾಲ್ವಿ ಜಲಾಶಯದ 9ನೇ ಗೇಟ್ ದುರಸ್ತಿ, ಹೆಚ್.ಬಿ.ಹಳ್ಳಿ ತಾಲೂಕಿನ ತಂಬ್ರಹಳ್ಳಿ ಪದವಿ ಕಾಲೇಜ್ ಆರಂಭ ಮತ್ತು ಎರಡನೇ ಹಂತದ ಏತ ನೀರಾವರಿ ಯೋಜನೆ ಅನುದಾನ ನೀಡುವಂತೆ ಒತ್ತಾಯಿಸಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಅಕ್ಕಿ ತೋಟೇಶ್ ಇವರ ನೇತೃತ್ವದ ತಂಡ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್‌ಗೆ ನಗರದಲ್ಲಿ ನಡೆದ ಜನತಾದರ್ಶನದಲ್ಲಿ ಮನವಿ ನೀಡಿ ಒತ್ತಾಯಿಸಿದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಅಕ್ಕಿ ತೋಟೇಶ್ ಮಾತನಾಡಿ, ಮಾಲವಿ ಜಲಾಶಯದಲ್ಲಿ ಎರಡು ಟಿಎಂಸಿ ಅಷ್ಟು ನೀರು ಸಂಗ್ರಗೊಳ್ಳುತ್ತದೆ. ಈ ಹಿಂದೆ ಶಾಸಕರಾಗಿದ್ದ ಎಸ್.ಭೀಮನಾಯಕ್ ಇವರು ಅಂದಿನ ಮುಖ್ಯಮಂತ್ರಿಸಿಎಂ ಸಿದ್ದರಾಮಯ್ಯ ಅವಧಿಯಲ್ಲಿ 165ಕೋಟಿ ರೂಪಾಯಿ ಅನುದಾನ ಒದಗಿಸಿದ ಪರಿಣಾಮವಾಗಿ ತುಂಗಭದ್ರ ಜಲಾಶಯದಿಂದ ನೀರು ಹರಿದು ಬರುತ್ತಿದೆ. ಆದರೆ ಮಾಲವಿ ಜಲಾಶಯದ 9ನೇ ಗೇಟ್ ತುಂಗಭದ್ರ ಜಲಾಶಯದ 19ನೇ ಗೇಟ್ ಮಾದರಿಯಲ್ಲಿಯೇ ವರ್ಷದ ಹಿಂದೆ ದುರಸ್ತಿಯಾಗಿದೆ. ಜಲಾಶಯದ ಗೇಟ್ ರಿಪೇರಿ ಮಾಡಲಾಗದೆ ಇದೀಗ ನೀರು ವ್ಯರ್ಥವಾಗಿ ಪೋಲಾಗಿ ಹರಿಯುತ್ತಿದೆ. ಕೂಡಲೇ ಮಾಲವಿ ಜಲಾಶಯದ ಗೇಟ್ ರಿಪೇರಿ ಮಾಡಿಸಬೇಕು ಮತ್ತು ಕಾಲುವೆ ಗಳನ್ನು ಸುಸ್ಥಿತಿಯಲ್ಲಿರಿಸಬೇಕು. ಈಗಾಗಲೇ ತಾಲೂಕಿನ ತಂಬ್ರಹಳ್ಳಿ ಗ್ರಾಮದಲ್ಲಿ ಪದವಿ ಕಾಲೇಜು ಆರಂಭಿಸುವಂತೆ ಒತ್ತಾಯಿಸಿ ಪಾದಯಾತ್ರೆ ನಡೆಸಲಾಗಿದೆ. ಈವರೆಗಿನ ಸರ್ಕಾರಗಳು ಕಾಲೇಜು ಆರಂಭಕ್ಕೆ ಸ್ಪಂದನೆ ನೀಡಿಲ್ಲ. ಸಾವಿರಾರು ವಿದ್ಯಾರ್ಥಿಗಳಿಗೆ ಸಹಕಾರಿಯಾಗಿ ಅದರಲ್ಲೂ ವಿಶೇಷವಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪೂರಕವಾಗಿ ಕೂಡಲೇ ಪದವಿ ಕಾಲೇಜು ಆರಂಭಿಸಬೇಕು. ತುಂಗಭದ್ರ ಜಲಾಶಯ ದಿಂದ ಮೂರುವರೆ ಸಾವಿರ ಎಕರೆ ನೀರು ನೀರುಣಿಸಲು ಸಾಧ್ಯವಾಗಿರುವ ಗ್ರಾಮದ ಏತ ನೀರಾವರಿ ಯೋಜನೆಯ 2ನೇ ಹಂತದ ಯೋಜನೆ ಯನ್ನು ಆರಂಭಿಸಲು ಅನುದಾನ ಒದಗಿಸ ಬೇಕು. ಈ ಕುರಿತಂತೆಯೂ ಜಿಲ್ಲಾ ಕೇಂದ್ರದ ವರೆಗೆ ಸುತ್ತಲಿನ ಗ್ರಾಮಸ್ಥರು ಪಾದಯಾತ್ರೆ ನಡೆಸಿದ್ದರು ಫಲಕಾರಿಯಾಗಿಲ್ಲ ಎಂದರು.

ತಾಲೂಕು ವಾಲ್ಮೀಕಿ ಸಮಾಜದ ಅಧ್ಯಕ್ಷ ಟಿ. ವೆಂಕೋಬಪ್ಪ ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವರು ಕೂಡಲೇ ಮೇಲಿನ ಎಲ್ಲ ಬೇಡಿಕೆಗಳನ್ನ ಈಡೇರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಕೇವಲ ನಗರ ಪ್ರದೇಶಗಳಿಗೆ ಸೀಮಿತವಾಗದೆ ಗ್ರಾಮೀಣ ಪ್ರದೇಶದ ಸಮಸ್ಯೆಗಳಿಗೂ ಪರಿಹಾರ ಒದಗಿಸಬೇಕು ಎಂದು ಒತ್ತಾಯಿಸಿದರು. ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಗೌರಜ್ಜ ನವರ ಗಿರೀಶ್, ಸುರೇಶ್ ಯಳಕಪ್ಪ ನವರ, ಐಟಿ ಕೊಟ್ರೇಶ್, ಅಂಬಾಡಿ ಮಹೇಶ್, ವಸಂತಕುಮಾರ ಜನ್ನು ಇತರರಿದ್ದರು.

# ಬೆಳಕಿನ ಹಾದಿ

## ಬದುಕಿನಲ್ಲಿ ಆಶಾವಾದಿಯಾಗಿರಬೇಕು

■ ಜಯಶ್ರೀ.ಎಂ.ಕರ್ಜಗಿ. ಹುಬ್ಬಳ್ಳಿ



ಒಂದು ದೇವಸ್ಥಾನದ ಬಳಿ ಒಬ್ಬ ಮಹಿಳೆ ಸುಮ್ಮನೆ ಕುಳಿತಿದ್ದಳು. ಕಳೆದ ಎರಡು ಗಂಟೆಗಳಿಂದ ಏನನ್ನೋ ಗಾಢವಾಗಿ ಯೋಚಿಸುತ್ತ ಕುಳಿತಿದ್ದಳು. ಬಹುಸಮಯದಿಂದ ಆಕೆಯನ್ನು ನೋಡಿದ ಪಂಡಿತರು 'ಯಾಕಮ್ಮಾ! ಏನಾಯ್ತು?' ಎಂದು ಕೇಳಿದರು. "ಏನೂ ಇಲ್ಲ ಗುರುಗಳೇ, ಮನಸ್ಸಿಗೆ ನೆಮ್ಮದಿ ಇಲ್ಲದಂತಾಗಿದೆ. ಯಾವ ಕೆಲಸ ಮಾಡಲೂ ಮನಸ್ಸು ಇಲ್ಲ. ಜೀವನವೇ ಬೇಜಾರಾಗಿದೆ" ಎಂದಳು.

'ಅದಕ್ಯಾಕೆ ಇಷ್ಟೊಂದು ಚಿಂತೆ ಮಾಡುತ್ತೀಯ ತಾಯಿ. ನಿನ್ನ ನೆಮ್ಮದಿ ಹಾಳಾಗಲು ಕಾರಣವಾದರೂ ಏನು ಹೇಳು. ಸಾಧ್ಯವಿದ್ದರೆ ಅದಕ್ಕೆ ಪರಿಹಾರ ಹೇಳುವೆ' ಎಂದರು ಪಂಡಿತರು. "ಗುರುಗಳೇ ನಾನು ಎಲ್ಲರನ್ನೂ ನಂಬುತ್ತೇನೆ. ಆದರೆ ಯಾರೂ ನನಗೆ ಸಹಾಯ ಮಾಡುವುದಿಲ್ಲ. ಎಲ್ಲರೂ ನನ್ನಿಂದ ಸಹಾಯ ಪಡೆಯುತ್ತಾರೆ. ಆದರೆ ನಾನು ಮತ್ತೆ ಮತ್ತೆ ಎಲ್ಲರಿಂದ ಮೋಸ ಹೋಗುತ್ತಿದ್ದೇನೆ. ಇದೇ ನನ್ನ ಚಿಂತೆಗೆ ಕಾರಣವಾಗಿದೆ. ಜೀವನದಲ್ಲಿ ನಾನು ಯಾರನ್ನು ನಂಬಬೇಕು. ಯಾರನ್ನು ನಂಬಬಾರದು ಎಂಬುದು ತಿಳಿಯುತ್ತಿಲ್ಲ. ಅದಕ್ಕಾಗಿ ಜೀವನವೇ ಬೇಸರವಾಗಿದೆ. ಅದಕ್ಕಾಗಿ ಸಾಯುವ ನಿರ್ಧಾರ ಮಾಡುತ್ತಿರುವೆ" ಎಂದಳು ನೊಂದ ಮಹಿಳೆ.

ಅದಕ್ಕೆ ಪಂಡಿತರು ಹೀಗೆ ಹೇಳಿದರು. 'ಜೀವನದಲ್ಲಿ ಹೂವು ಎಂದಿಗೂ ಎರಡು ಬಾರಿ ಅರಳುವುದಿಲ್ಲ. ಹಾಗೆಯೇ ಈ ಜನ್ಮ ಮತ್ತೆ ಮತ್ತೆ ಬರುವುದಿಲ್ಲ. ಬದುಕಿನಲ್ಲಿ ಸಾವಿರಾರು ಜನ ಸಿಕ್ಕರೂ ಮನಸ್ಸಿಗೆ ಎಲ್ಲರೂ ಇಷ್ಟವಾಗುವುದಿಲ್ಲ. ಇಷ್ಟ ಆದವರನ್ನು ಒಮ್ಮೆ ಕಳೆದುಕೊಂಡರೆ ಅಂತವರು ಮತ್ತೆ ಮತ್ತೆ ಸಿಗುವುದಿಲ್ಲ. ಸಂತೋಷ ಎನ್ನುವುದು ಹತ್ತು ಸಾವಿರ ಖರ್ಚು ಮಾಡಿ, ಹತ್ತೂರು ಸುತ್ತಿದರೂ ಬರುವುದಿಲ್ಲ. ನಮ್ಮವರು ಎಂದುಕೊಂಡವರ ಜೊತೆ ಹತ್ತು ನಿಮಿಷ ಮನಸ್ಸು ಬಿಚ್ಚಿ ಮಾತನಾಡಿದರೆ ಸಾಕು ನಿಜವಾದ ಸಂತೋಷ ಸಿಗುತ್ತದೆ. ಮನಸ್ಸಿಗೆ ಹತ್ತಿರವಾದರು ಜೊತೆ ಇದ್ದಾಗಲೇ ಸಮಯಕೊಟ್ಟು ಮಾತನಾಡಬೇಕು. ಖಡ್ಗ ಚಿನ್ನದ್ದೇ ಆಗಿರಲಿ, ಕಬ್ಬಿಣದ್ದೇ ಆಗಿರಲಿ ಅದರ ಕೆಲಸ ಒಂದೇ ಆಗಿರುತ್ತದೆ. ಹಾಗೆಯೇ ಜೀವನದಲ್ಲಿ ಕೆಲವೊಬ್ಬರಿಗೆ ಎಷ್ಟೇ ಒಳ್ಳೆಯ ಸ್ಥಾನ ನೀಡಿದರೂ ಸಮಯ ಬಂದಾಗ ಅವರ ನಿಜ ಸ್ವರೂಪ ಗೊತ್ತಾಗುತ್ತದೆ.

ಹಾಗೆಯೇ ಕನಸು ಕಾಣುವುದನ್ನು ಬಿಟ್ಟಾಗ ಬದುಕು ಸಾಯುತ್ತದೆ. ನಂಬುವುದನ್ನು ಬಿಟ್ಟಾಗ ಭರವಸೆಗಳು ಸಾಯುತ್ತವೆ. ಜೀವನದಲ್ಲಿ ಏಳು ಬೀಳುಗಳು ಸಹಜ. ಕಹಿ ಘಟನೆಗಳ ಬಗ್ಗೆ ಯೋಚಿಸುತ್ತಾ ಕುಳಿತರೆ ಮತ್ತಷ್ಟೂ ಕೆಳಗಿಳಿಯುತ್ತೇವೆ. ಆಶಾವಾದ ಬೆಳೆಸಿಕೊಂಡು ಮುನ್ನುಗಿದರೆ ಬದುಕಿನ ಸುಂದರ ಮುಖ ಗೋಚರಿಸುತ್ತದೆ. ಪ್ರತಿಯೊಂದು ಕಷ್ಟಕ್ಕೂ ಒಂದು ಅಂತ್ಯ ಇದೆ. ಪ್ರತಿಯೊಂದು ಸಮಸ್ಯೆಗೂ ಒಂದು ಪರಿಹಾರವಿದೆ. ಅದು ನಮಗೆ ಸಿಗುವವರೆಗೂ ತಾಳ್ಮೆಯಿಂದ ಕಾಯಬೇಕು. ಅನ್ಯರ ಸಂಗ ಮಾಡುವಾಗ ತುಂಬಾ ಎಚ್ಚರಿಕೆ ವಹಿಸಬೇಕು. ಈಗಿನ ಕಾಲದಲ್ಲಿ ಮೋಸ ಮಾಡುವ ಜನರೇ ಹೆಚ್ಚಾಗಿದ್ದಾರೆ. ಅದರಲ್ಲೂ ಮಹಿಳೆಯರು ತುಂಬಾ ಜಾಗ್ರತೆ ವಹಿಸಬೇಕು. ಸಣ್ಣ ಸಣ್ಣ ವಿಷಯಗಳಿಗೆ ಗಂಭೀರವಾಗಿ ಚಿಂತೆ ಮಆಡದೇ ನಿತ್ಯವೂ ನಿನ್ನ ಪಾಲಿನ ಕೆಲಸವನ್ನು ಅಚ್ಚುಟ್ಟಾಗಿ ಮಾಡುವುದನ್ನು ರೂಢಿಸಿಕೊಳ್ಳಬೇಕು. ಫಲಾಫಲಗಳು ಒಂದಲ್ಲಾ ಒಂದು ದಿನ ಸಿಕ್ಕೆ ಸಿಗುತ್ತವೆ. ಅದಕ್ಕಾ ಬದುಕಿನಲ್ಲಿ ಆಶಾವಾದಿಯಾಗಿರಬೇಕು' ಎಂದು ಹೇಳಿದ ಪಂಡಿತರು ದೇವಸ್ಥಾನದಿಂದ ಹೊರನಡೆದರು.

# ಕೃಷಿ ಯೋಜನೆಗೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಕೃಷಿ ಇಲಾಖೆ ವತಿಯಿಂದ ಪ್ರಸಕ್ತ ಸಾಲಿನಡಿ ಬಳ್ಳಾರಿ ಮತ್ತು ಕುರುಗೋಡು ತಾಲ್ಲೂಕು ವ್ಯಾಪ್ತಿಯ ರೈತರಿಂದ ಕೃಷಿ ಭಾಗ್ಯ ಯೋಜನೆಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಕಳೆದ ವರ್ಷ ಕೃಷಿ ಭಾಗ್ಯ ಯೋಜನೆಯು ಕೇವಲ ಮಳೆಯಾಶ್ರಿತ ಪ್ರದೇಶಕ್ಕೆ ಸೀಮಿತವಾಗಿತ್ತು. ಪ್ರಸಕ್ತ ಸಾಲಿನಲ್ಲಿ ಕೃಷಿ ಭಾಗ್ಯಯೋಜನೆಯನ್ನುಅಚ್ಚುಕಟ್ಟು ಪ್ರದೇಶಕಕ್ಕೂ ವಿಸ್ತರಿಸಲಾಗಿದೆ.

ಒಣ ಭೂಮಿ ರೈತರ ಆದಾಯ ಮಳೆಯ ಮೇಲೆ ಅವಲಂಭಿತವಾಗಿರುವುದರಿಂದ ನಿರೀಕ್ಷಿತ ಆದಾಯ ಸಿಗುವುದು ಕಷ್ಟ ಸಾಧ್ಯವಾಗಿದ್ದು, ರೈತರು ಕೃಷಿ ಭಾಗ್ಯ ಯೋಜನೆಯ ವಿವಿಧ ಘಟಕಗಳ ಅನುಷ್ಠಾನಗೊಳಿಸಿ ಯೋಜನೆಯ ಸದುಪಯೋಗ ಪಡೆಯಬಹುದು ಎಂದು ಮಾಹಿತಿ ನೀಡಿದ್ದಾರೆ.

ಕಡಿಮೆ ಮಳೆ ಬೀಳುವ ಬಹುತೇಕ ಪ್ರದೇಶಗಳಲ್ಲಿ ರೈತರು ಸುಮಾರು 500 ರಿಂದ ಸಾವಿರ ಅಡಿಯವರೆಗೆ ಕೊಳವೆ ಬಾವಿ ಕೊರೆಯಲು ಆರ್ಥಿಕವಾಗಿ ಹೆಚ್ಚು ವೆಚ್ಚ ಮಾಡುತ್ತಿದ್ದು, ಕೊಳವೆ ಬಾವಿ ವಿಫಲವಾದರೆ ಅಥವಾ ಕೆಲ ವರ್ಷಗಳ ನಂತರ ಬತ್ತಿಹೋದ ಸಂದರ್ಭದಲ್ಲಿ ರೈತರು ಕಷ್ಟದಲ್ಲಿ ಸಿಲುಕುತ್ತಿದ್ದಾರೆ. ರೈತರು ಕೊಳವೆ ಬಾವಿಯ ಬದಲಾಗಿ ಹೂಡಿಕೆಯನ್ನು ಕೃಷಿ ಭಾಗ್ಯಯೋಜನೆಯ ಘಟಕಗಳಲ್ಲಿ ಮಾಡಿ ಸುಸ್ಥಿರ ಕೃಷಿಗಾಗಿ ಬಳಸಬಹುದಾಗಿದೆ ಎಂದು ತಿಳಿಸಿದ್ದಾರೆ.

ಕೃಷಿ ಹೊಂಡ ಮಾಡಿಸಿಕೊಂಡ ಎಲ್ಲಾ ಫಲಾನುಭವಿಗಳಿಗೆ ಕ್ಷೇತ್ರ ಬದು, ಡಿಸೇಲ್ ಇಂಜನ್ ಹಾಗೂ ತುಂತುರು ನೀರಾವರಿ ಘಟಕಗಳಿಗೆ ಸಹಾಯಧನ ಒದಗಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಬಳ್ಳಾರಿಯ ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ಜಿಟಿಟಿಸಿ ಡಿಪ್ಲೋಮಾ ಕೋರ್ಸ್ ಪ್ರವೇಶಕ್ಕೆ ಅವಧಿ ವಿಸ್ತರಣೆ

■ ಹಂಪಿ ಟೈಮ್ಸ್ ಕೊಪ್ಪಳ

ದದೇಗಲ್‌ನ ಸರಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರದಿಂದ (fnn1) 2024–25ನೇ ಸಾಲಿಗೆ ಎಸ್.ಎಸ್.ಎಲ್.ಸಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಡಿಪ್ಲೋಮಾ ಕೋರ್ಸ್ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಕೆ ಅವಧಿಯನ್ನು ವಿಸ್ತರಿಸಲಾಗಿದೆ.

ಜಿಟಿಟಿಸಿ ಕೇಂದ್ರದಲ್ಲಿ 3+1 ವರ್ಷ ಅವಧಿಯ ಡಿಪ್ಲೋಮಾ ಇನ್ ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ ( ಇ&ಸಿ), ಡಿಪ್ಲೋಮಾ ಇನ್ ಮೆಕಾಟ್ರಾನಿಕ್ಸ್ (ಡಿಎಂಸಿಹೆಚ್) ಹಾಗೂ ಡಿಪ್ಲೋಮಾ ಇನ್ ಟೂಲ್ ಅಂಡ್ ಡೈ ಮೇಕಿಂಗ್ (ಡಿಟಿಡಿಎಂ) ಕೋರ್ಸುಗಳಿಗೆ ಎಸ್.ಎಸ್.ಎಲ್.ಸಿ ತೇರ್ಗಡೆ ಹೊಂದಿದ ಮತ್ತು ಪಿಯುಸಿ ಹಾಗೂ ಐಟಿಐ ಪಾಸಾದ ವಿದ್ಯಾರ್ಥಿಗಳು ಸರಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, ಗದಗ ರೋಡ್, ದದೇಗಲ್ ಇಲ್ಲಿಗೆ ಖುದ್ದಾಗಿ ಬಂದು ಅರ್ಜಿಯನ್ನು ಪಡೆದು, ಭರ್ತಿ ಮಾಡಿ ಆಗಸ್ಟ್ 31ರೊಳಗಾಗಿ ಸಲ್ಲಿಸಬೇಕು. ಜಿಟಿಟಿಸಿ ಕೇಂದ್ರದಲ್ಲಿ ಕೆಲವೇ ಸೀಟುಗಳು ಮಾತ್ರ ಲಭ್ಯವಿರುವುದರಿಂದ ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಜಿಟಿಟಿಸಿ ಕಾರ್ಯಾಲಯಕ್ಕೆ ಅಥವಾ ಮೊ.ಸಂ: 7507094445, 9986088894 ಗೆ ಸಂಪರ್ಕಿಸಬಹುದಾಗಿದೆ ಎಂದು ಸರಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರದ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಶ್ರಾವಣ । ಸಂವತ್ಸರ: ಕ್ರೋಧಿ

**17–08–2024 – ಶನಿವಾರ**

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪೂರ್ವಾಷಾಡ |
| ಯೋಗ | : ಪ್ರೀತಿ |
| ಕರಣ | : ಬಾಳವ |
| ಸೂರ್ಯೋದಯ | : 06:05:11 |
| ಸೂರ್ಯಾಸ್ತ | : 18:56:18 |
| ರಾಹು ಕಾಲ | : 09:18–10:54 |
| ಯಮಘಂಡ ಕಾಲ | : 14:07–15:44 |
| ಗುಳಿಕ ಕಾಲ | : 06:05–07:42 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 16–08–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1623.79 ಅಡಿ |
| ಒಳ ಹರಿವು | 33419 ಕ್ಯುಸೆಕ್ |
| ಹೊರ ಹರಿವು | 86310 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 72.607 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1628.42 ಅಡಿ |
| ಒಳ ಹರಿವು | 5160 ಕ್ಯುಸೆಕ್ |
| ಹೊರ ಹರಿವು | 9797 ಕ್ಯುಸೆಕ್ |
| ಸಾಮರ್ಥ್ಯ | 88.249 ಟಿಎಂಸಿ |

# ಹೆದ್ದಾರಿಗಳ ದುರಸ್ತಿಗೆ 210ಕೋಟಿ ರೂ. ಬಿಡುಗಡೆ

## ಸಿಎಂ ಸಿದ್ದರಾಮಯ್ಯ ಹೇಳಿಕೆ । ರಾಜ್ಯದ ಅತಿವೃಷ್ಟಿ, ಪ್ರವಾಹ ಪರಿಸ್ಥಿತಿ ಪರಿಶೀಲನೆ ಸಭೆಯ ಮುಖ್ಯಾಂಶಗಳು

**ಹಂಪಿ ಟೈಮ್ಸ್ ಬೆಂಗಳೂರು:**
ರಾಜ್ಯದಲ್ಲಿ ಜೂನ್ 1 ರಿಂದ ಆಗಸ್ಟ್ 15 ರ ವರೆಗೆ ವಾಡಿಕೆಗಿಂತ ಶೇ. 22 ರಷ್ಟು ಹೆಚ್ಚು ಮಳೆಯಾಗಿದ್ದು, ಚಾಮರಾಜನಗರ, ಮಂಡ್ಯ ತುಮಕೂರಿನಲ್ಲಿ ಅತ್ಯಧಿಕ ಮಳೆಯಾಗಿದೆ. 13 ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಈ ಬಾರಿ ಇಡೀ ರಾಜ್ಯದಲ್ಲಿ ಉತ್ತಮ ಮಳೆಯಾಗಿದೆ. ಎಲ್ಲಾ ಇಲಾಖೆಯ ಅಧಿಕಾರಿಗಳು ಜನರ ಅಹವಾಲುಗಳಿಗೆ ಸ್ಪಂದಿಸಿ ಕೂಡಲೇ ಕಾರ್ಯೋನ್ಮುಖರಾಗಬೇಕು ಎಂದು ಖಡಕ್ ಸೂಚನೆ ನೀಡಿದರು.

ಬೆಂಗಳೂರಿನಲ್ಲಿ ಶುಕ್ರವಾರ ರಾಜ್ಯ ಅತಿವೃಷ್ಟಿ, ಪ್ರವಾಹ ಪರಿಶೀಲನೆ ಸಭೆಯ ಅಧ್ಯಕ್ಷತೆವಹಿಸಿ ಸಲಹೆ, ಸೂಚನೆಗಳನ್ನು ನೀಡಿದರು.

1 ಮುಂದಿನ ನಾಲ್ಕು ವಾರಗಳಲ್ಲಿ ದಕ್ಷಿಣ ಒಳನಾಡು, ಉತ್ತರ ಒಳನಾಡು, ಕರಾವಳಿ, ಮಲೆನಾಡಿನಲ್ಲಿ ವಾಡಿಕೆಗಿಂತ ಅಧಿಕ ಮಳೆಯಾಗುವುದಾಗಿ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮ ಗಳನ್ನು ಕೈಗೊಳ್ಳುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

2. ಸಿರುಗುಪ್ಪ, ದೇವದುರ್ಗ, ಔರಾದ್, ಬೀದರ್, ಕಮಲಾನಗರ, ಹುಬ್ಬಳ್ಳಿ, ಶಹಾಪುರ, ಯಾದಗಿರಿ ಮೊದಲಾದ ಒಂಬತ್ತು ತಾಲ್ಲೂಕುಗಳಲ್ಲಿ ಈಗ ಕಡಿಮೆ ಮಳೆ ಇದೆ. ಆದರೆ ಈ ತಾಲ್ಲೂಕುಗಳಲ್ಲಿಯೂ ಉತ್ತಮ ಮಳೆಯಾಗುವುದಾಗಿ ಮುನ್ಸೂಚನೆ ಬಂದಿದೆ.

3. ರಾಜ್ಯಾದ್ಯಂತ 82 ಲಕ್ಷ ಹೆಕ್ಟೇರ್ ಗುರಿಗೆ ಎದುರಾಗಿ 70 ಲಕ್ಷ ಹೆಕ್ಟೇರ್ ಬಿತ್ತನೆ ಆಗಿದೆ. ಈ ಬಾರಿ ಗುರಿ ಮೀರಿ ಸಾಧನೆ ಆಗುವ ನಿರೀಕ್ಷೆ ಇದೆ. ಮುಂಗಾರು ಪೂರ್ವ ಬಿತ್ತನೆ ಆಗಿರುವ ಉದ್ದು ಮತ್ತು ಹೆಸರು ಕಟಾವಿಗೆ ಬಂದಿದೆ.


4. ಮಳೆಯಿಂದ 81589 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ. ಅಂತಿಮ ವರದಿ ಬಂದ ಕೂಡಲೇ ಪರಿಹಾರ ವಿತರಣೆಗೆ ಕ್ರಮ ವಹಿಸಲಾಗುವುದು.

5. ಮಳೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ವಿವಿಧ ಏತ ನೀರಾವರಿ ಯೋಜನೆಗಳಡಿ ಎಲ್ಲೆಲ್ಲಿ ಅವಕಾಶವಿದೆಯೋ ಅಲ್ಲೆಲ್ಲ ಕೆರೆಗಳಿಗೆ ನೀರು ತುಂಬಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಆ ಮೂಲಕ ಅಂತರ್ಜಲ ಮಟ್ಟ, ಕುಡಿಯುವ ನೀರಿನ ಸಮಸ್ಯೆ ಕಡಿಮೆಯಾಗುವುದು ಎಂದು ಸೂಚಿಸಲಾಯಿತು.

6. ರಾಜ್ಯದ ಜಲಾಶಯಗಳು ಒಟ್ಟು ಶೇ. 89 ರಷ್ಟು ಭರ್ತಿ ಆಗಿವೆ. ಈ ಹಿನ್ನೆಲೆಯಲ್ಲಿ ಕೆರೆಗಳನ್ನು ತುಂಬಿಸುವಂತೆ ಹಾಗೂ ಮಳೆ ಮುನ್ಸೂಚನೆ ಆಧರಿಸಿ, ಮುಂಚಿತವಾಗಿಯೇ ಸೂಕ್ತ ಪ್ರಮಾಣದ ನೀರನ್ನು ಜಲಾಶಗಳಿಂದ ಹೊರಗೆ ಬಿಡುವ ಮೂಲಕ, ಮಳೆಯಾದಾಗ ಜಲಾಶಯಗಳಲ್ಲಿ ಏಕಾಏಕಿ ನೀರಿನ ಸಂಗ್ರಹ ಹೆಚ್ಚಾಗಿ ಪ್ರವಾಹ ಉಂಟಾಗುವುದನ್ನು ತಡೆಗಟ್ಟಲು ಸೂಚಿಸಿದರು.

7. ಈ ಕುರಿತು ಸರ್ಕಾರದಲ್ಲಿ ಸಂಬಂಧಿಸಿದ ಎಲ್ಲ ಇಲಾಖೆಗಳ ನಡುವೆ ಸಮನ್ವಯ ಇರಬೇಕು ಎಂದು ಸೂಚಿಸಲಾಗಿದೆ.

8. ಸೇತುವೆಗಳ ಫಿಟ್‌ನೆಸ್‌ಗಳ ಬಗ್ಗೆ ವರದಿಯನ್ನು ಲೋಕೋಪಯೋಗಿ ಇಲಾಖೆಯಿಂದ ಪಡೆಯಬೇಕು. ಸಂಪರ್ಕ ರಸ್ತೆಗಳು ಕುಸಿದಿದ್ದರೆ ಅವುಗಳನ್ನು ಸರಿಪಡಿಸಿ, ವಾಹನ ಸಂಚಾರಕ್ಕೆ ಸುಗಮಗೊಳಿಸಬೇಕು. ಎಲ್ಲಾ ಸೇತುವೆ, ರಸ್ತೆಗಳನ್ನು ನಿರಂತರವಾಗಿ ಪರಿಶೀಲನೆ ನಡೆಸಿ ಯಾವುದೇ ಅನಾಹುತವಾಗದಂತೆ ಎಚ್ಚರಿಕೆ ವಹಿಸಬೇಕು.



9. ಮುಳುಗು ಸೇತುವೆಗಳಲ್ಲಿ ವಾಹನ ಸಂಚಾರವನ್ನು ನಿರ್ಬಂಧಿಸಬೇಕು. ಯಾವುದೇ ಕಾರಣಕ್ಕೂ ವಾಹನ ಸಂಚರಿಸದಂತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು.

10. ಅತಿವೃಷ್ಟಿಯಿಂದಾಗಿ ರಾಜ್ಯದಲ್ಲಿ ಒಟ್ಟು 67 ಸಾವು ಸಂಭವಿಸಿದ್ದು, 66 ಪ್ರಕರಣಗಳಲ್ಲಿ 329 ಲಕ್ಷ ರೂ. ಪರಿಹಾರ ಒದಗಿಸಲಾಗಿದೆ.

11. ಅಂಗನವಾಡಿ, ಶಾಲೆ ಕಟ್ಟಡಗಳ, ಸೇತುವೆಗಳು, ಕರೆಗಳು ಸುಸ್ಥಿತಿಯಲ್ಲಿರುವ ಬಗ್ಗೆ ಖಾತರಿಪಡಿಸಿಕೊಳ್ಳಲು ಸೂಚಿಸಲಾಗಿದೆ.

12. ಮಲೆನಾಡು, ಕರಾವಳಿ ಭಾಗಗಳಲ್ಲಿ ಇರುವ ಹಳೇ ಶಾಲಾ ಕಟ್ಟಡಗಳನ್ನು ಗುರುತಿಸಿ, ಕ್ರಿಯಾ ಯೋಜನೆಯಲ್ಲಿ ಆದ್ಯತೆ ಮೇರೆಗೆ ದುರಸ್ತಿ ಪಡಿಸಬೇಕು.

13. ಪಂಚಾಯತ್ ಮಟ್ಟದಲ್ಲಿ ಟಾಸ್ಕ್ ಫೋರ್ಸ್ ರಚಿಸಸಲಾಗಿದೆ. 20 ಸಾವಿರ ರೂ. ಅನುದಾನ ಒದಗಿಸಲಾಗಿದೆ. ಸಾವು ನೋವು ತಪ್ಪಿಸುವುದು ನಮ್ಮ ಆದ್ಯತೆ. ಗ್ರಾಮ ಪಂಚಾಯತ್ ಟಾಸ್ಕ್ ಫೋರ್ಸ್ ಬಲಪಡಿಸಲು ಕ್ರಮ ಕೈಗೊಳ್ಳಬೇಕು.

14. ಮನೆ ಕುಸಿತ, ನೀರಿನಲ್ಲಿ ಕೊಚ್ಚಿ ಹೋಗುವಂತಹ ಪ್ರಕರಣಗಳಲ್ಲಿ ಸಾವು ನೋವು ತಪ್ಪಿಸಲು ಸಾಧ್ಯವಿದೆ. ಶಿಥಿಲವಾದ ಮನೆಗಳನ್ನು ಗ್ರಾಮೀಣಾಭಿವೃದ್ಧಿ ಇಲಾಖೆ ಗ್ರಾಮಮಟ್ಟದಲ್ಲಿ ಮೊದಲೇ ಗುರುತಿಸಬೇಕು.

15. ಒಟ್ಟು 1283 ಮನೆಗಳು ಶೇ. 75 ಕ್ಕಿಂತ ಹೆಚ್ಚು ಹಾನಿಗೊಳಗಾಗಿದೆ. ಅದರಲ್ಲಿ 879 ಪ್ರಕರಣಗಳಲ್ಲಿ ತಲಾ 1.20 ಲಕ್ಷ ರೂ. ನಂತೆ 10.54 ಕೋಟಿ ರೂ. ಪರಿಹಾರ ವಿತರಿಸಲಾಗಿದೆ. ಇದರೊಂದಿಗೆ ದೇವರಾಜ ಅರಸು ವಸತಿ ಯೋಜನೆಯಡಿ ಮನೆ ಮಂಜೂರು ಮಾಡಲಾಗುವುದು. ಈಗಾಗಲೇ 500 ಮನೆ ಮಂಜೂರು ಮಾಡಲಾಗಿದೆ.

16. 2817 ಕುಟುಂಬಗಳಿಗೆ ಬಟ್ಟೆ ಬರೆ ಹಾನಿಗಾಗಿ 2500 ರೂ. ನಂತೆ ಹಾಗೂ 2811 ಕುಟುಂಬಗಳಿಗೆ ಗೃಹೋಪಯೋಗಿ ಸಾಮಗ್ರಿಗಳ ಹಾನಿಗೆ ತಲಾ 2500 ರಂತೆ ಒಟ್ಟು 1.40 ಕೋಟಿ ರೂ. ಪರಿಹಾರ ವಿತರಿಸಲಾಗಿದೆ.

17. ರಾಜ್ಯದಲ್ಲಿ ಮನೆ ಕುಸಿದು 29 ಸಾವು ಸಂಭವಿಸಿದ್ದು, ನಗರ ಮತ್ತು ಗ್ರಾಮ ಪ್ರದೇಶಗಳಲ್ಲಿ ಶಿಥಿಲಗೊಂಡ ಮನೆಗಳಲ್ಲಿರುವವರನ್ನು ಖಾಲಿ ಮಾಡಿ ಅವರಿಗೆ ಪುನರ್ವಸತಿ ಕಲ್ಪಿಸಬೇಕು.

18. ಪ್ರವಾಹ ಇರುವಾಗ ನೀರಿಗೆ ಇಳಿಯಲು ಬಿಡಬಾರದು, ಪೊಲೀಸರ ಸಹಕಾರದಿಂದ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಗ್ರಾಮ ಪಂಚಾಯತ್, ಕಂದಾಯ ಇಲಾಖೆ ಹಾಗೂ ಪೊಲೀಸ್ ಇಲಾಖೆ ಈ ನಿಟ್ಟಿನಲ್ಲಿ ಮುಂಜಾಗರೂಕತೆ ಕ್ರಮಗಳನ್ನು ಕೈಗೊಳ್ಳಬೇಕು.

19. ಬೆಂಗಳೂರು ನಗರದಲ್ಲಿ ಕಂಟ್ರೋಲ್ ರೂಂ ಗಳನ್ನು ಗುರುತಿಸಲಾಗಿದೆ. ದೊಡ್ಡ ಚರಂಡಿಗಳು ಓಪನ್ ಇರುವ ಸ್ಥಳಗಳನ್ನು ಗುರುತಿಸಿ ಮೊದಲೇ ಬಂದೋಬಸ್ತ್ ಮಾಡಲಾಗಿದೆ. ಇದರಿಂದ ಇದುವರೆಗೆ ಯಾವುದೇ ಸಾವು ನೋವು ಸಂಭವಿಸಿಲ್ಲ.

20. ರಾಜಕಾಲುವೆಗಳ ಒತ್ತುವರಿ ತೆರವು ಮಾಡಬೇಕು ಎಂದು ಸೂಚಿಸಲಾಯಿತು. ಕೋಡಿಗೆ ಗೇಟ್ ಅಳವಡಿಸುವ ಮೂಲಕ, ಮಳೆಗಾಲದಲ್ಲಿ ಕೆರೆಗಳಲ್ಲಿ ನೀರಿನ ಪ್ರಮಾಣ ನಿಯಂತ್ರಿಸಿ ಪ್ರವಾಹ ತಡೆಗಟ್ಟಲು ಸೂಚಿಸಲಾಯಿತು.

21. ಬೆಂಗಳೂರಿನಲ್ಲಿ ಅಧಿಕಾರಿಗಳಿಗೆ ಕಟ್ಟೆಚ್ಚರ ವಹಿಸಲು ಸೂಚಿಸಲಾಗಿದೆ. ಪ್ರತಿದಿನ ನಗರದ ಪರಿಸ್ಥಿತಿ ಕುರಿತು ಸಭೆ ನಡೆಸಿ ಪರಿಶೀಲಿಸಲು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸೂಚಿಸಲಾಗಿದೆ. ವಲಯ ಆಯುಕ್ತರ ಸಭೆ ನಡೆಸಿ, ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಹಾಗೂ ಎಂಜಿನಿಯರುಗಳಿಗೆ ಜವಾಬ್ದಾರಿ ನಿಗದಿ ಪಡಿಸಿ. ಕರ್ತವ್ಯಲೋಪ ಎಸಗಿದರೆ, ಮುಲಾಜಿಲ್ಲದೆ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

22. ಬೆಂಗಳೂರು ಅಭಿವೃದ್ಧಿಗೆ ಸಂಬಂಧಿಸಿದ ಸಂಸ್ಥೆಗಳಾದ ಬಿಡಿಎ, ಬಿಡಬ್ಲ್ಯುಎಸ್ ಎಸ್ ಬಿ, ಬಿಎಂಆರ್ ಸಿ ಎಲ್, ಬಿಬಿಎಂಪಿ ಮೊದಲಾದವುಗಳ ನಡುವೆ ಸಮನ್ವಯ ವಹಿಸಲು ಸೂಚಿಸಲಾಯಿತು.

23. ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಮ್ಮ ಅಧೀನದಲ್ಲಿರುವ ಅಧಿಕಾರಿಗಳು ಎಚ್ಚರಿಕೆಯಿಂದ ಇರಲು ಸೂಚಿಸಬೇಕು.

24. ನಗರ ಮತ್ತು ಪಟ್ಟಣಗಳಲ್ಲಿ ಕಾಲುವೆಗಳಲ್ಲಿ ಮಳೆ ನೀರು ಸರಾಗವಾಗಿ ಹರಿದು ಹೋಗುವಂತೆ ಕ್ರಮ ಕೈಗೊಳ್ಳಬೇಕು. ಎಲ್ಲಾ ಚರಂಡಿಗಳ ಸ್ವಚ್ಚತೆಯನ್ನು ನಿರಂತರವಾಗಿ ಮಾಡಬೇಕು. 210ಕೋಟಿ ರೂ. ರಾಜ್ಯ ಹೆದ್ದಾರಿಗಳ ದುರಸ್ತಿಗೆ ಈಗಾಗಲೇ ಬಿಡುಗಡೆ ಮಾಡಲಾಗಿದೆ.

25. ಪ್ರವಾಹ ಸಂದರ್ಭದಲ್ಲಿ ಉದ್ಭವವಾಗಬಹುದಾದ ಸಾಂಕ್ರಾಮಿಕ ಕಾಯಿಲೆಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸುವಂತೆ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಯಿತು. ಡೆಂಗ್ಯು ಪ್ರಕರಣಗಳಲ್ಲಿ ಇಳಿಕೆಯಾಗಿದೆ. ಚಿಕುನ್‌ಗುನ್ಯಾ, ಮಲೇರಿಯಾ ರೋಗ ಹರಡದಂತೆ ಕೂಡ ಎಚ್ಚರಿಕೆ ವಹಿಸುವಂತೆ ಸೂಚಿಸಲಾಯಿತು.

26. ಪ್ರವಾಹ, ಭಾರಿ ಮಳೆ ಸಂದರ್ಭದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡರೆ, ಕೂಡಲೇ ಸರಿಪಡಿಸಲು ಸಿದ್ಧತೆ ಮಾಡಿಕೊಳ್ಳಲು ಸೂಚಿಸಲಾಯಿತು. ಅಗತ್ಯವಿರುವ ಟ್ರಾನ್ಸ್‌ಫಾರ್ಮರ್‌ಗಳು, ಕಂಬಗಳನ್ನು ಲಭ್ಯಗೊಳಿಸಲು ಸೂಚಿಸಲಾಯಿತು. ಈ ಸಂದರ್ಭದಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಸಿಎಂ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಹಿರಿಯ ಅಧಿಕಾರಿಗಳು ಇದ್ದರು.

# ಕಲಾಂ, ಸೇವಾಲಾಲ್ ವೃತ್ತಕ್ಕಿಲ್ಲ ಸ್ವಾತಂತ್ರ್ಯದ ಬೆಳಕು: ಆಕ್ರೋಶ

**ಹಂಪಿ ಟೈಮ್ಸ್ ಕೂಡ್ಲಿಗಿ**
ಸ್ವಾತಂತ್ರ್ಯ ಸಂಭ್ರಮದ ಅಂಗವಾಗಿ ಪಟ್ಟಣದ ಎಲ್ಲಾ ಪ್ರಮುಖ ವೃತ್ತಗಳಿಗೆ ವಿದ್ಯುತ್ ದೀಪ ಅಲಂಕಾರ ಮಾಡಿ, ಡಾ.ಎಪಿಜೆ ಅಬ್ದುಲ್ ಕಲಾಂ ವೃತ್ತಕ್ಕೆ ದೀಪಾಲಂಕಾರ ಮಾಡದೇ ಇರುವುದು ಖಂಡನೀಯ ಎಂದು ಕರ್ನಾಟಕ ಮುಸ್ಲಿಂ ಸಂಘದ ರಾಜ್ಯಾಧ್ಯಕ್ಷ ಎಲ್. ಎಸ್.ಬಷೀರ್ ಅಹಮದ್ ದೂರಿದರು.



ರಾಷ್ಟ್ರೀಯ ಹಬ್ಬಗಳು ಹಾಗೂ ಪ್ರಮುಖ ಜಯಂತಿಗಳಲ್ಲಿ ಪಟ್ಟಣದ ಎಲ್ಲಾ ಮಹನೀಯರ ವೃತ್ತಗಳಿಗೆ ತಾಲೂಕು ಆಡಳಿತದ ನಿರ್ದೇಶನದಂತೆ ವಿದ್ಯುತ್ ದೀಪ ಅಲಂಕಾರ ಮಾಡುವುದು ವಾಡಿಕೆ. ಅದರಂತೆ ಸ್ವಾತಂತ್ರ್ಯ ದಿನದಂದು ಪಟ್ಟಣದ ಎಲ್ಲಾ ವೃತ್ತಗಳಿಗೂ, ಸರ್ಕಾರಿ, ಅರೆ ಸರ್ಕಾರಿ ಕಚೇರಿಗಳಿಗೂ ವಿದ್ಯುತ್ ದೀಪಗಳನ್ನು ಹಾಕಿ ಅಲಂಕಾರ ಮಾಡಿದ್ದರು, ಆದರೆ ಬೆಂಗಳೂರು ರಸ್ತೆಯಲ್ಲಿನ ಡಾ.ಎಪಿಜೆ ಅಬ್ದುಲ್ ಕಲಾಂ ವೃತ್ತದಲ್ಲಿ ವಿದ್ಯುತ್ ದೀಪ ಅಲಂಕಾರ ಮಾಡದೇ ಅಗೌರವ ತೋರಿದ್ದಾರೆ. ಈ ದೇಶದ ಪ್ರಥಮ ಪ್ರಜೆಯಾಗಿದ್ದ ದಿ.ಎಪಿಜೆ ಅಬ್ದುಲ್ ಕಲಾಂ, ಆದರ್ಶ ರಾಷ್ಟ್ರಪತಿ ಎಂದು ಕೀರ್ತಿ ಪಡೆದಿದ್ದರು, ಅಲ್ಲದೆ ದಕ್ಷ ವಿಜ್ಞಾನಿಯಾಗಿ ಕ್ಷಿಪಣಿ ಜನಕ ಎಂದು ಬಿರುದು ಸಹ ಪಡೆದಿದ್ದರು, ಸರಳ,ಸಜ್ಜನಿಕೆ ಹೆಸರಾಗಿದ್ದ ಮಾಜಿ ರಾಷ್ಟ್ರಪತಿ ವೃತ್ತಕ್ಕೆ ವಿದ್ಯುತ್ ದೀಪ ಅಲಂಕಾರ ಮಾಡದೇ ಅಗೌರವ ತೋರುವ ಜತೆ ಆ ವೃತ್ತದಲ್ಲಿ ಪಪಂ ಕಚೇರಿ ವತಿಯಿಂದ ನಿರ್ವಹಣೆ ಮಾಡದೇ ಅನೇಕ ಗಿಡಗಳು ಬೆಳೆದಿದೆ. ಇನ್ನಾದರೂ ಸಂಬಂಧಿಸಿದ ಅಧಿಕಾರಿಗಳು, ಜನ ಪ್ರತಿನಿಧಿಗಳು ಎಚ್ಚೆತ್ತು ಇಂತಹ ಅವಘಡ ಜರುಗದಂತೆ ಎಚ್ಚರಿಕೆ ವಹಿಸಿ ಮುಂದಿನ ದಿನಗಳಲ್ಲಿ ರಾಷ್ಟ್ರೀಯ ಹಬ್ಬಗಳಲ್ಲಿ ಕಲಾಂ ವೃತ್ತಕ್ಕೆ ವಿದ್ಯುತ್ ಅಲಂಕಾರ ಮಾಡಬೇಕು. ಈ ಕೂಡಲೇ ಪಪಂ ಮುಖ್ಯಾಧಿಕಾರಿ ಸ್ಥಳ ಪರಿಶೀಲಿಸಿ ಇಲ್ಲಿನ ತ್ಯಾಜ್ಯವನ್ನು ತಗೆಸಿ ಸ್ವಚ್ಛಗೊಳಿಸಿ ದೇಶಕಂಡ ಒಬ್ಬ ಆದರ್ಶ ಮಾಜಿ ರಾಷ್ಟ್ರಪತಿಗೆ ಗೌರವ ಕೊಡಬೇಕೆಂದು ಅವರು ಒತ್ತಾಯಿಸಿದರು. ಈ ಸಂಧರ್ಭದಲ್ಲಿ ಕಾಟೇರ ಶೇಷಪ್ಪ, ರಾಘವೇಂದ್ರ, ಮುನ್ನಬಾಯಿ, ಸಿರಾಜ್, ಶಬ್ಬೀರ್ ಸೇರಿದಂತೆ ಅನೇಕರು ಇದ್ದರು.

**ಶ್ರೀ ಸಂತ ಸೇವಾಲಾಲ್ ವೃತ್ತಕ್ಕೂ ಅಗೌರವ ಖಂಡನೆ.:** ಪಟ್ಟಣದ ಸಂಡೂರು ರಸ್ತೆಯ ಶ್ರೀ ಸಂತ ಸೇವಾಲಾಲ್ ವೃತ್ತಕ್ಕೂ ಸ್ವಾತಂತ್ರ್ಯ ದಿನದ ಅಂಗವಾಗಿ ವಿದ್ಯುತ್ ದೀಪ ಅಲಂಕಾರ ಮಾಡದೇ ಇರುವುದು ಖಂಡನೀಯ ಎಂದು ಶ್ರೀ ಸೇವಾಲಾಲ್ ಸಂಘದ ತಾಲೂಕು ಅಧ್ಯಕ್ಷ ಎಂ.ವಾಸುದೇವ ನಾಯ್ಕ್ ಕೂಡ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಒಬ್ಬ ತಳ ಸಮುದಾಯದ ಸಂತನಿಗೆ ಗೌರವಿಸಬೇಕು ಎಂದು ಮನವಿ ಮಾಡಿದ್ದಾರೆ.

# ಸಂಗೊಳ್ಳಿ ರಾಯಣ್ಣ ಜಯಂತಿ ಆಚರಣೆ

**ಹಂಪಿ ಟೈಮ್ಸ್ ಕೊಟ್ಟೂರು**
ಬ್ರಿಟಿಷರಿಗೆ ಸಿಂಹ ಸ್ವಪ್ನವಾಗಿದ್ದ, ಕಿತ್ತೂರು ರಾಣಿ ಚೆನ್ನಮ್ಮ ಬಲಗೈ ಬಂಟ, ಕೆಚ್ಚೆದೆಯ ವೀರ ಸಂಗೊಳ್ಳಿ ರಾಯಣ್ಣರ ಜಯಂತಿಯನ್ನು ತಾಲೂಕಿನ ಬೋರನಹಳ್ಳಿ ಗ್ರಾಮದಲ್ಲಿ ಗ್ರಾಮಸ್ಥರು ಹಾಗೂ ಯುವಕರು ಆಚರಿಸಿದರು.

ಶುಕ್ರವಾರ ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಪುಷ್ಪಾ ಹಾರಗಳಿಂದ ಅಲಂಕರಿಸಿ, ಪೂಜೆ ಸಲ್ಲಿಸಿ ಭಕ್ತಿಯಿಂದ ನಮಿಸಿದರು ನಂತರ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು.

ಯುವಕರು ಸಂಗೊಳ್ಳಿ ರಾಯಣ್ಣ ಅವರ ವಿವಿಧ ಗೀತೆಗಳ ಡಿಸೆ ಸೌಂಡ್ ಗೆ ಹೆಜ್ಜೆ ಹಾಕಿ ಮೈಮೇಲೆ ಮತ್ತು ಹಣೆಗೆ ಬಂಡಾರವನ್ನು ಧರಿಸಿ ಸಂಗೊಳ್ಳಿ ರಾಯಣ್ಣ ಅವರ ಭಾವಚಿತ್ರವುಳ್ಳ ಪಟಗಳನ್ನು ಹಿಡಿದು ಪ್ರತಿಮೆ ಮುಂದೆ ಕುಣಿದು ಕುಪ್ಪಳಿಸಿ ಅದ್ದೂರಿಯಾಗಿ



ಸಂಗೊಳ್ಳಿ ರಾಯಣ್ಣ ಜಯಂತಿ ಆಚರಣೆ ಮಾಡಿದರು, ಗ್ರಾಮದಲ್ಲೆಡ ಹಬ್ಬದ ಸಂಭ್ರಮ ಗೋಚರಿಸಿತು.

# ಡಾ.ಅಂಬೇಡ್ಕರ್ ವಿದ್ಯಾ ಜ್ಯೋತಿ ಸ್ಕಾಲರ್‌ಶಿಪ್

**ಮೂರನೆ ಪುಟದಿಂದ**
ಎಲ್ಲಾ ಗ್ರಾಮೀಣ, ಅರೆ–ನಗರ ಮತ್ತು ನಗರ ಶಾಖೆಗಳಲ್ಲಿ ಜಾರಿಗೊಳಿಸಲಾಗಿದೆ.

5, 6, 7, 8, 9 ಮತ್ತು 10 ನೇ ತರಗತಿಯಿಂದ ಸರ್ಕಾರಿ, ಸರ್ಕಾರಿ ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳಿಂದ ತಲಾ ಒಬ್ಬ ಪ್ರತಿಭಾವಂತ ವಿದ್ಯಾರ್ಥಿನಿಯನ್ನು ವಿದ್ಯಾರ್ಥಿವೇತನಕ್ಕಾಗಿ ಆಯಾ ವ್ಯಾಪ್ತಿಯ ಶಾಖೆಗಳು ಕಾರ್ಯ ಮಾಡುತ್ತವೆ.

ವಿದ್ಯಾರ್ಥಿವೇತನದ ಸಹಾಯವು 5, 6 ಮತ್ತು 7 ನೇ ತರಗತಿ ವಿದ್ಯಾರ್ಥಿಗಳಿಗೆ ವರ್ಷಕ್ಕೆ ಪ್ರತಿ ವಿದ್ಯಾರ್ಥಿಗೆ ರೂ.3 ಸಾವಿರ ಮತ್ತು 8ನೇ, 9ನೇ ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ಪ್ರತಿ ವರ್ಷಕ್ಕೆ ರೂ.5 ಸಾವಿರ ನೀಡಲಾಗುವುದು.

ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಇಲಾಖೆಯ ವಿಷಯ ಪರಿವೀಕ್ಷಕಿ ವೇದಾವತಿ, ಕೆನರಾ ಬ್ಯಾಂಕ್‌ನ ವ್ಯವಸ್ಥಾಪಕರು, ಕಾರ್ಯನಿರ್ವಾಹಕ ನಿರ್ದೇಶಕರು ಹಾಗೂ ಸಿಬ್ಬಂದಿಗಳು, ವಿದ್ಯಾರ್ಥಿಗಳು ಇದ್ದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಹಿಂದಿ

**10 ನೇ ತರಗತಿ ಹಿಂದಿ**

### बसंत की सचाई

**I . अनुरूपता :**

1) कश्मीरी सेब : कहानी ::
बसंत की सचाई : ----- **( एकांकी )**
2) पं राजकीशोर : मालिक ::
अमरसिंह : ------ **( नौकर )**
3) रामू : बेईमान :: बसंत : **( ईमानदार )**
4) बसंत : अहीर टीला ::पंडित राजकिशो : ---
**( किशनगंज )** ( April -2022 )
5) प्रताप : छोटा भाई ::बसंत : -----
**(बडा भाई )** ( July -2022 )

**II . एक वाक्य में उत्तर लिखिए ।**

6) पंडित राजकिशोर कहाँ रहते थे ?
पंडित राजकिशोर **किशनगंज** में रहते थे |

7) बसंत और प्रताप किसके घर में रहते थे ?
बसंत और प्रताप **भीखू अहीर के** घर में रहते थे |

8)बसंत क्या- क्या बेचता था ?
बसंत **छलनी, बटन, दियासलाई आदि चीजें** बेचता था |

**II. दो - तीन वाक्यों में उत्तर लिखिए ।**

**9) बसंत राजकिशोर से दो पैसे लेने से क्यो इनकार करता है ? ( April -2022 )**
बसंत राजकिशोर से दो पैसे लेने से इनकार करता है | क्योंकि - वह भीख नही लेना चाहता था | वह मेहनत करके पैसे कमाना चाहता था | वह ईमानदारी लडका था | मुफ्त में दिए पैसे को वह भीख समझता था |

**10) बसंत राजकिशोर के पास क्यो नही लौटा ?**
बसंत राजकिशोर के पास नही लौटा क्योंकि - बसंत नोट बुनाकर वापास लौट रहा था, तब वह एक मोटर के नीचे आ गया | मोटर उसके ऊपर से निकल गई | बह बेहोश हो गया था |

**III. तीन-चार वाक्यों में उत्तर लिखिए ।**

**11) बसंत एक ईमानदार लडका है । कैसे ?**
**( 2018, 2020, 2022 , June -2023 )**
* बसंत एक ईमानदार लडका है ।
* वह गरीब होने पर भी भीख लेना नही चाहते थे ।
* वह परिश्रम से पैसे कमाना चाहता था ।
* नोट भुनाकर लौटते समय वह दुर्घटनाग्रस्त हो जाता है ।
* वह बुरी तरह से घायल होने पर भी होश में आते ही पंडित राजकिशोर का चिल्लर पैसे लौटाने प्रताप को भेजता है ।

**12) पंडित राजकिशोर के मानवीय व्यवहार का परिचय दीजिए ।**
**( 2019, April -2023, June -2023 )**
* पंडित राजकिशोर मजदूरों के नेता थे ।
* वे गरीबों के प्रति हमेशा सहानुभूति दिखानेवाले व्यक्ति थे ।
* वे निस्वार्थ सेवा करते थे ।
* बसंत की स्वाभिमानता देखकर, आवश्कता न रहने पर भी सहायता करने की दृष्टि से उनसे एक छलनी खरीदते हैं ।
* प्रताप से बसंत की दुर्घटना सुनकर उसका घर जाते हैं ।
* डाँक्टर को बुलाकर बसंत की इलाज करवाते हैं ।

**13) बसंत और प्रताप भीखू अहीर के घर में क्यो रहते थे ?**
बसंत और प्रताप के माता -पिता ने मारे गए थे | दंगो के दिनो में उन्हे किसे ने मार डाला था | इसलिए वे अनाथ हो गए थे | वे गरीब थे | उनका नीजी घर नही था | इसलिए वे दोनो भीखू अहीर के घर में क्यो रहते थे |

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : **ಹೆಚ್.ತುಕಾರಾಮ್ ನಾಯ್ಕ,** ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಕ.ರಾ.ಮಕ್ಕಳ ಸಾಹಿತ್ಯ ಪರಿಷತ್, ವಿಜಯನಗರ ಜಿಲ್ಲೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055